₹ 5/-

# ನೇಸರು

## ತಿಂಗಳೋಲೆ

PAGES 20

MAY 2023 | Nesaru Tingalole | Vol. XLI - 05



## ಭರತಮಾತೆ ನಿನ್ನ ಮಡಿಲು ತುಂಬಿದೆ

## INDIA'S POPULATION EXCEEDS CHINA

ಮೈಸೂರು ಅಸೋಸಿಯೇಷನ್ ಮುಂಬೈ


**THE MYSORE ASSOCIATION, BOMBAY**

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

# ಅಸೋಸಿಯೇಷನ್ನಿನಲ್ಲಿ 22.04.2023ರಂದು ನಡೆದ ಅಕ್ಷಯ ತೃತೀಯ ಪೂಜೆ

ಅಸೋಸಿಯೇಷನ್ ವಿದ್ಯಾ ಗಣಪತಿಯನ್ನು ಪ್ರತಿಷ್ಠಾಪಿಸಿ ಇಂದಿಗೆ 27 ವರ್ಷಗಳು ಸಂದಿವೆ. ಪ್ರತಿವರ್ಷವೂ ಈ ದಿನ ಅಂದರೆ ಅಕ್ಷಯ ತೃತೀಯದಂದು ವಿಶೇಷ ಪೂಜೆ, ಹೋಮಾದಿಗಳನ್ನು ನಡೆಸಿಕೊಂಡು ಬರಲಾಗಿದೆ.





ಅಂತೆಯೇ ಈ ವರ್ಷವೂ ಎಪ್ರಿಲ್ 22ರಂದು (ಮುಂಬೈ ಮಹಾರಾಷ್ಟ್ರದ ಕಾಲ ನಿರ್ಣಯ) ಅಕ್ಷಯ ತೃತೀಯದ ಸಂಜೆ ಶ್ರೀ ಗಣಪತಿ ಭಟ್ಟರ ನೇತೃತ್ವದಲ್ಲಿ ಶ್ರೀ ಶಶಿಕಾಂತ ಜೋಶಿ ಹಾಗೂ ಶ್ರೀಮತಿ ವೀಣಾ ಜೋಶಿಯವರು ಪೂಜೆ ಮತ್ತು ಹೋಮವನ್ನು ಸಮರ್ಪಕವಾಗಿ ನಡೆಸಿಕೊಟ್ಟರು.

ಇದೀಗ ಅಸೋಸಿಯೇಷನ್ 97 ವರ್ಷ ತುಂಬಿ 98ನೇ ವರ್ಷದಲ್ಲಿ ಮುನ್ನಡೆಯುತ್ತಿದೆ. ಅಕ್ಷಯ ತೃತೀಯದಂದು ನಡೆಸಿದ ಪೂಜೆಯಿಂದ ದೇವರ ಕೃಪೆ ಒದಗಿ ಬಂದು ತನ್ನ 100ನೆಯ ಶತಮಾನದ ವರ್ಷವನ್ನು ವಿಜೃಂಭಣೆಯಿಂದ ಆಚರಿಸಲೆಂದು ಹಾರೈಸುತ್ತೇವೆ. ಸದಸ್ಯರೂ, ಹಿತೈಷಿಗಳೂ ಒಟ್ಟಾಗಿ ಸಹಕರಿಸಬೇಕೆಂದು ಕೋರುತ್ತೇವೆ.

On Saturday, 29th April, 2023 at 6.30 pm. 'Nada Taranga' presented the flute recital by Kum. Aditi Sudarshan and Troupe at Mysore Association, Mumbai. The Program was compered by Vidushi Smt. Shyamala Radhesh.

Smt. Nalini Dinesh & Troupe presented Karnatic Classical Vocal.







Accompanying Artist on Violin: Smt. Mangala Vaidyanathan & on Mrudanga : Shri. Rohit Prasad.

Courtesy : Shri. H.R.L.Venkatesh

ನೇಸರು ತಿಂಗಳೋಲೆ

ಸಂಪುಟ 41 ಮೇ–2023 ಸಂಚಿಕೆ 05

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
ನೀಲಕಂಠ
***

ಬೆಂಗಳೂರು ಪ್ರತಿನಿಧಿ
ಎಂ. ಎ. ಎನ್. ಪ್ರಸಾದ್
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

- Ed.

****

ಸಂಪರ್ಕ ವಿಳಾಸ:

ನೇಸರು

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ
ಮುಂಬಯಿ – 400 019.
✆ 24037065
Email:
mysoreassociation.mumbai@gmail.com
Website:
www.mysoreassociation.in

# ಸರಳ ಬದುಕಿನ ಮೂಲಮಂತ್ರ



**✍ ಡಾ. ಜ್ಯೋತಿ ಸತೀಶ್**

ಎಲ್ಲರ ಬದುಕು ಹೂವಿನ ಹಾಸಿಗೆಯಂತಿರೋದಿಲ್ಲ. ಎಲ್ಲರ ಬದುಕಿನಲ್ಲೂ ಒಂದಲ್ಲ ಒಂದು ರೀತಿಯ ಸಂಘರ್ಷ ಇದ್ದೇ ಇರುತ್ತದೆ. ಆ ಎಲ್ಲ ಸಂಘರ್ಷಗಳನ್ನು ಮೆಟ್ಟಿ ನಿಂತ ಮೇಲೆನೇ ನಮಗೆ ಯಶಸ್ಸು ಸಿಗೋದು. ಜೀವನದಲ್ಲಿ ಸೋತೆ ಅಂದಾಕ್ಷಣ ಯಾರೆಲ್ಲ ನಿಮ್ಮನ್ನು ಯಾವ ರೀತಿಯಲ್ಲಿ ಸಂತೈಸುತ್ತಾರೆ ಅನ್ನೋದನ್ನು ನೀವು ಗಮನಿಸಬೇಕು. ಜೀವನದಲ್ಲಿ ಸೋತ ತಕ್ಷಣ, ಮದ್ಯಪಾನಿ ವ್ಯಸನಿಗಳಾಗೋದು ಸಮಸ್ಯೆಗೆ ತಕ್ಕ ಪರಿಹಾರವಲ್ಲ. ನೋವನ್ನು ಬಿಡು ಮೊದಲು ಚಿಲ್ ಮಾಡು ಎಂದು ನಿಮ್ಮನ್ನು ಹುರಿದುಂಬಿಸೋವವರನ್ನು ಮೊದಲು ದೂರ ಮಾಡಿ. ಇವುಗಳೆಲ್ಲ ತಾತ್ಕಾಲಿಕ ಉಪಶಮನಗಳೇ ಹೊರತು, ಶಾಶ್ವತ ಹಾಗೂ ಸರಿಯಾದ ಪರಿಹಾರವಲ್ಲ. ಯಾರು ನಮ್ಮನ್ನು ಅಡ್ಡದಾರಿಗೆ ಎಳೆಯಲು ಪ್ರಯತ್ನಿಸುತ್ತಾರೋ ಅವರನ್ನು ಮೊದಲು ದೂರ ಮಾಡಬೇಕು. ಯಾರು ನಿಮಗೆ ಸರಿಯಾದ ದಾರಿ ತೋರಿಸುತ್ತಾರೋ, ಅಂದರೆ ನಿಮ್ಮ ತಂದೆ ತಾಯಿ, ಅಕ್ಕ, ತಮ್ಮ, ಅಣ್ಣ ಇವರುಗಳು. ಇವರೆಲ್ಲರೂ ನಿಮ್ಮನ್ನು ಮನಸಾರೆ ಒಳ್ಳೆಯದನ್ನು ಬಯಸುವವರು. ನಿಮ್ಮ ಕುಟುಂಬವೇ ನಿಮ್ಮ ಕೊನೆಯಲ್ಲಿ ಜೊತೆ ನೀಡುವವರು.

ನೀವು ತಪ್ಪು ಮಾಡಿದಾಗ, ನೀನು ಮಾಡಿದ್ದೇ ಸರಿ ಎನ್ನುವ ಸುಳ್ಳು ಆಶ್ವಾಸನೆ ನೀಡುವವರನ್ನು ಮೊದಲು ದೂರ ಮಾಡಿ. ನಿಮ್ಮ ಕುಟುಂಬ ಮಾತ್ರ ನೀವು ಗೆದ್ದಾಗ ಬೆನ್ನು ತಟ್ಟುವುದರ ಜೊತೆಗೆ, ನೀವು ತಪ್ಪು ಮಾಡಿದಲ್ಲಿ, ನಿಮ್ಮನ್ನು ತಿದ್ದಿ ಸರಿ ದಾರಿ ತೋರಿಸುವುವರು. ಹಾಗಾಗಿ ಸದಾ ನಿಮ್ಮ ಒಳಿತನ್ನೇ ಬಯಸುವ, ನಿಮ್ಮ ಕುಟುಂಬದವರನ್ನು, ನಿಮ್ಮ ಆತ್ಮೀಯರನ್ನು ಸದಾ ನಿಮ್ಮ ಹತ್ತಿರದಲ್ಲಿಟ್ಟುಕೊಳ್ಳಿ. ಆಗ ನಿಮ್ಮ ಬದುಕು ಎಲ್ಲ ರೀತಿಯಿಂದಲೂ ಸುಗಮವಾಗುತ್ತದೆ. ಇದು ಒಂದು ರೀತಿಯಲ್ಲಿ ನಿಮ್ಮ ಜವಾಬ್ದಾರಿ ಕೂಡ, ನಿಮ್ಮ ಅಕ್ಕ ಪಕ್ಕದಲ್ಲಿರುವವರು ಜೀವನದಲ್ಲಿ ನಿಮ್ಮನ್ನು ಮೇಲಕ್ಕೆ ಎತ್ತಬೇಕೆ ಹೊರತು ಮತ್ತಷ್ಟು ಹೊಂಡಕ್ಕೆ ದೂಡುವವರನಲ್ಲ. ಆಗ ನೀವು ಮಾನಸಿಕವಾಗಿಯೂ, ದೈಹಿಕವಾಗಿಯೂ ಶಕ್ತಿಶಾಲಿಗಳಾಗುತ್ತೀರಿ. ನೀವು ಕುಗ್ಗಿದಾಗ, ನಿಮ್ಮನ್ನು ಮೇಲೆಕ್ಕೆ ಎತ್ತಲು ನಿಮ್ಮ ಕುಟುಂಬ ನಿಮ್ಮ ಜೊತೆಗಿದ್ದರೆ, ನೀವು ಎಲ್ಲ ರೀತಿಯಿಂದಲೂ ವಿಜಯಿಗಳಾದ ಹಾಗೆ. ಇನ್ನು ಕೆಲವರಿಗೆ ಹಣವನ್ನು ಸಂಪಾದಿಸುವುದರ ಜೊತೆಗೆ ತಮ್ಮ ಹವ್ಯಾಸದ ಕಡೆಗೂ ಗಮನಕೊಡಬೇಕು. ಕೆಲವರು ಕೇವಲ ತಮ್ಮ ಹವ್ಯಾಸದ ಕಡೆಗೇನೇ ಗಮನಕೊಡುತ್ತಾರೆ, ಆದರೆ ಜೀವನದಲ್ಲಿ ಆರ್ಥಿಕವಾಗಿ ಸ್ವಾವಲಂಬಿಯಾಗೋದು ಅಷ್ಟೇ ಮುಖ್ಯ. ಹವ್ಯಾಸದ ಬೆನ್ನು ಹತ್ತಿ, ಹಣ ಸಂಪಾದನೆ ಮಾಡದೆ, ದಿನನಿತ್ಯದ ಅವಶ್ಯಕತೆಗಳಿಗಾಗಿ ಪರದಾಡಬೇಕಾದ ಪರಿಸ್ಥಿತಿ ಒದಗಬಹುದು. ಯಾವುದೇ ಹವ್ಯಾಸವನ್ನು ಬೆಳೆಸಿಕೊಳ್ಳುವ ಮೊದಲು ನೀವು ಆರ್ಥಿಕವಾಗಿ ಸ್ವಾವಲಂಬಿಯಾಗೋದು ಮುಖ್ಯ. ನಿಮ್ಮ ಜೊತೆಗೆ ನಿಮ್ಮನ್ನು ನಂಬಿದವರನ್ನೂ ಸಂಕಷ್ಟಕ್ಕೆ ಸಿಲುಕಿಸುತ್ತೀರಿ. ಬದುಕಿನಲ್ಲಿ ಸೋಲು ಗೆಲವುಗಳ ಏರಿಳಿತ ಇದ್ದದ್ದೇ. ಇದನ್ನು ಸಮತೋಲನದಲ್ಲಿ ಕಾಯ್ದಿಟ್ಟುಕೊಳ್ಳಬೇಕಾದರೆ, ಧ್ಯಾನ ಮಾಡಬೇಕು, ಮೆಡಿಟೇಷನ್ ಮಾಡಬೇಕು. ಧ್ಯಾನ್ಯದ ಮುಖೇನ ನಿಮ್ಮನ್ನು ನೀವು ಹುಡುಕಬೇಕು. ಆಗ ಎಷ್ಟೇ ದೊಡ್ಡ ಸಂಕಷ್ಟ ಬಂದರೂ ಎಲ್ಲವೂ ಸಾಮಾನ್ಯದಂತೆ ಕಾಣಿಸುತ್ತದೆ. ಹಣ, ಆಸ್ತಿಪಾಸ್ತಿ ಎಲ್ಲವೂ ತೃಣ ಸಮಾನ ಎನಿಸುತ್ತದೆ. ಮಾನಸಿಕವಾಗಿ ನೀವು ಮತ್ತಷ್ಟು ಸದೃಢರಾಗುತ್ತೀರಿ. ಜೀವನ ಚಿಕ್ಕದು, ಹಾಗೆ ಅಷ್ಟೇ ಸರಳ ಕೂಡ. ಯಶಸ್ಸು ನಿಮ್ಮ ನೆತ್ತಿಗೇರದ ಹಾಗೆ, ಸೋಲು ಮನಸ್ಸಿಗೆ ತಟ್ಟದ ಹಾಗೆ ತೆಗೆದುಕೊಳ್ಳಬೇಕು ಇಷ್ಟೇ. ಇದೇ ನಮ್ಮ ಜೀವನದ ಮೂಲಮಂತ್ರವಾಗಿಸಿಕೊಳ್ಳಬೇಕು.

(ಕಳೆದ ಸಂಚಿಕೆಯಿಂದ)

# ಹೀಗಿತ್ತು ಮಲೆನಾಡು



✍ ಜಿ.ವಿ.ನವಿಲೇಕರ್

(ಈ ದೀರ್ಘ ಲೇಖನವು ಕೊಳವಳ್ಳಿ ಪ್ರಕಾಶನ ಪ್ರಕಟಿಸಿರುವ "ನನ್ನೊಳಗಿನ ಮಲೆನಾಡು "ಪುಸ್ತಕದಲ್ಲಿ ಪ್ರಕಟವಾಗಿದೆ)

**ಲಗ್ನ, ಸಂಪ್ರದಾಯ, ಸಮಾರಂಭಗಳು:** ಬಹು ಪೂರ್ವದಲ್ಲಿ ಬಾಲ್ಯವಿವಾಹಗಳೇ ಚಾಲ್ತಿಯಲ್ಲಿದ್ದವು. ನಂತರ ಬದಲಾವಣೆಯಾಗುತ್ತಾ ಅರಿವು ಜಾಸ್ತಿಯಾಗುತ್ತಾ ಲಗ್ನದ ವಯಸ್ಸು ಗಂಡು ಮತ್ತು ಹೆಣ್ಣಿಗೆ ಜಾಸ್ತಿಯಾಗುತ್ತಾ ಬರುತ್ತಿರುವುದು ಹಾಲಿ ಅನುಭವದಲ್ಲಿ ಕಾಣುತ್ತಿದೆ. ಆ ಕಾಲದ ಲಗ್ನದ ಉದ್ದೇಶ ಸಂಬಂಧಗಳನ್ನು ಪುನಃ ಪುನಃ ಬೆಸೆಯುವುದರಲ್ಲಿ ತುಂಬಾ ಮಹತ್ವವಿದ್ದಂತೆ ಕಾಣುತ್ತದೆ. ಬ್ರಾಹ್ಮಣರಲ್ಲಿ ಸಂಬಂಧ ಮಾಡಲು ಸಗೋತ್ರ ವಿವಾಹಕ್ಕೆ ನಿಷಿದ್ಧವಿತ್ತು. ಗೋತ್ರಕ್ಕೆ ತುಂಬಾ ಮಹತ್ವ ಕೊಡುತ್ತಿದ್ದ ಕಾಲ ಹಾಗೂ ಜಾತಿ, ಒಳಪಂಗಡಗಳಲ್ಲಿ ಆಯಾಯ ಪಂಗಡಗಳೊಡನೆ ಸಂಬಂಧ ಮಾಡಲು ಮೊದಲ ಆದ್ಯತೆ ಇದ್ದಿತು. ವರದಕ್ಷಿಣೆ ಎಂಬುದು ಇರಲೇ ಇಲ್ಲ. ಆದರೆ ಕೆಲವು ಪಂಗಡಗಳಲ್ಲಿ ಕನ್ಯಾದಕ್ಷಿಣೆ (ಕನ್ಯಾ ತೆರ) ಇದ್ದುದಾಗಿ ಕೇಳಿಬರುತ್ತಿತ್ತು. ಎಲ್ಲೆಲ್ಲೂ ಸಾಧಾರಣ ವ್ಯವಸಾಯ ಮಾಡುವ ಅವಿಭಕ್ತ ಕುಟುಂಬಗಳೇ ಜಾಸ್ತಿ ಇರುತ್ತಿದ್ದು, ವಿದ್ಯೆ, ಸರ್ಕಾರಿ ನೌಕರಿಗಿಂತ ಸಮಾಜದ ಆದ್ಯತೆ ಸಂಪತ್ತುಗಳು ಅರ್ಹ ವರನ ಯೋಗ್ಯತೆಯಾಗಿತ್ತು. ವರ ಮತ್ತು ವಧುಗಳ ವರಸಾಮ್ಯ ನೋಡುವಾಗ, ವಧೂವರರ ವಯಸ್ಸು ಗೃಹ ಕಾರ್ಯಗಳಲ್ಲಿ ವಧುವಿನ ತರಬೇತಿ- ಕಾರ್ಯನಿರ್ವಹಣೆ, ಸಮಾಜದಲ್ಲಿ ವಧು-ವರರ ಮನೆಯವರ ಅಂತಸ್ತು, ಮನೆತನ ಮುಂತಾಗಿ ಮಹತ್ವವಿದ್ದ ಕಾಲವಾಗಿತ್ತು. ನೌಕರ ವರನಿಗೆ ಸಾಮಾನ್ಯವಾಗಿ ಎರಡನೇ ಸ್ಥಾನ. ಕೃಷಿಕನಿಗೆ ಮೊದಲನೇ ಆದ್ಯತೆ ಇತ್ತು. ಕೆಲವು ಸಂದರ್ಭಗಳಲ್ಲಿ ಕನ್ಯೆ ಹಾಗೂ ವರನ ವಯಸ್ಸಿನ ಅಂತರದಲ್ಲಿ ವಿಪರೀತ ಏರುಪೇರುಗಳು ಇದ್ದು, ಹಿರಿಯರ ಒಪ್ಪಿಗೆ ಮತ್ತು ಭಯದಿಂದ ಲಗ್ನವಾದ ನಿದರ್ಶನಗಳಿದ್ದವು. ಹೀಗೆ ಲಗ್ನವಾದ ದಂಪತಿಗಳು ಅನ್ಯೋನ್ಯ ಪ್ರೀತಿಯಿಂದ ಬಹುಕಾಲ ಸುಖದಾಂಪತ್ಯದಿಂದಿದ್ದು, ಮಕ್ಕಳು, ಮೊಮ್ಮಕ್ಕಳನ್ನು ಕಂಡ ಉದಾಹರಣೆಗಳೂ ಇದ್ದವು.

ಲಗ್ನವಾದ ನಂತರ, ಗಂಡಾಗಲೀ, ಹೆಣ್ಣಾಗಲೀ ಪರಸ್ಪರ ದಂಪತಿಗಳು ಬದುಕಿರುವ ತನಕ ಬೇರೊಂದು ಲಗ್ನವಾಗುತ್ತಿರಲಿಲ್ಲ. ತತ್ರಾಪಿ ಹೆಣ್ಣಿಗೆ ಎರಡನೇ ಲಗ್ನಕ್ಕೆ ಯಾವ ವಿಧದಿಂದಲೂ ಸಮಾಜದ ಒಪ್ಪಿಗೆ ಸಿಗುತ್ತಿರಲಿಲ್ಲ. ಲಗ್ನವಾಗಿ ಕೆಲವು ಕಾಲದ ನಂತರ ದಂಪತಿಗಳಿಗೆ ಮಕ್ಕಳಾಗದೇ ಹೋದಲ್ಲಿ, ಗಂಡು ಪುನಃ ಇನ್ನೊಂದು ಹೆಣ್ಣನ್ನು ಲಗ್ನವಾಗಲು ಸಮಾಜದ ಸಮ್ಮತಿಯಿತ್ತು. ಆದರೆ ಎಂದೂ ವಿವಾಹ ವಿಚ್ಛೇದನವೆಂಬುದು ಈಗಿನಂತೆ ಇರಲಿಲ್ಲ. ಹೆಣ್ಣಿಗೆ ಈ ಅವಕಾಶವಿರಲಿಲ್ಲ. ಗಂಡನ ಅವಸಾನದ ನಂತರ ಹೆಣ್ಣಿನ ಪಾಡು ತುಂಬಾ ಕಷ್ಟದಾಯಕವಾಗಿದ್ದು, ಬ್ರಾಹ್ಮಣರಲ್ಲಿ ಹೆಣ್ಣಿನ ತಲೆಯನ್ನು ಬೋಳಿಸಿ ವಿರೂಪಗೊಳಿಸಿ, ಸನ್ಯಾಸಿ ಬದುಕಿಗೆ ಜೀವನವನ್ನು ಕಡ್ಡಾಯವಾಗಿ ದೂಡುವ ಅಭ್ಯಾಸ ಅಂದಿನ ಸಮಾಜದಲ್ಲಿತ್ತು. ಆದರೆ ದಂಪತಿಗಳಿಗೆ ಮಕ್ಕಳಾಗದಿದ್ದರೆ, ದತ್ತು ಮಕ್ಕಳನ್ನು ಪಡೆಯುವ ಸಂಪ್ರದಾಯವಿರುತ್ತಿತ್ತು.

ಲಗ್ನವಾದ ನಂತರ ಈ ತರಹ ಸಂಪ್ರದಾಯದ ಜೀವನಶೈಲಿ ಇದ್ದಾಗಲೂ ಆ ಕಾಲದ ಲಗ್ನ ಸಮಾರಂಭಗಳು ಮಾತ್ರ ತುಂಬಾ ಸರಳವಾಗಿರುತ್ತಿದ್ದವು. ಈಗಿನಂತೆ ಯಾವ ಅದ್ದೂರಿ ಆಡಂಬರಗಳೂ ಇರಲಿಲ್ಲ. ಸಾಮಾನ್ಯವಾಗಿ ವಧುವಿನ ಸ್ವಗೃಹದಲ್ಲೇ ಲಗ್ನ ಸಮಾರಂಭವಿರುತ್ತಿತ್ತು. ಈಗಿನಂತೆ ಕಲ್ಯಾಣಮಂಟಪಗಳು ಇರಲಿಲ್ಲ. ದೇವಸ್ಥಾನಗಳಲ್ಲಿ ಲಗ್ನ ಮಾಡುವುದು ತುಂಬಾ ಅಪರೂಪವಾಗಿತ್ತು. ದೇವಸ್ಥಾನಗಳಲ್ಲಿಯೂ, ಲಗ್ನ ಮಾಡುವ ಸೌಕರ್ಯಗಳು ಇರಲಿಲ್ಲ. ಅಲ್ಲದೆ ಈಗಿನಂತೆ ಮನೆ ಹೊರಗಡೆ ಲಗ್ನ ಮಾಡುವ ಮಾನಸಿಕ ತಯಾರಿಯೂ ಲಗ್ನ ಮಾಡುವವರಲ್ಲಿರಲಿಲ್ಲ. ಆ ಕಾಲಕ್ಕದು ಸರಿಯಿದ್ದಿರಬಹುದು. ಲಗ್ನದ ಆ ಕಾಲದ ತಯಾರಿ ಎಂದರೆ ಲಗ್ನಕ್ಕಾಗಿ ತಳಿರು- ತೋರಣಗಳ ಚಪ್ಪರ, ಕಂಬಗಳಿಗೆ ಬಾಳೆಮರ ಕಟ್ಟಿದ ಅಲಂಕಾರ, ಚಪ್ಪರಗಳಲ್ಲಿ ಹಣ್ಣು ಬಾಳೆಗೊನೆ ನೇತಾಕುವುದು, ತೆಂಗಿನಕಾಯಿಗಳನ್ನು ನೇತು ಬಿಡುವುದು, ಲಗ್ನ ನಡೆಯುವ ಜಾಗಗಳನ್ನು ಕೆತ್ತಿ, ಸಗಣಿ ನೀರಿನಿಂದ ಶುಚಿಗೊಳಿಸಿ, ಚೊಕ್ಕವಾಗಿಟ್ಟುಕೊಳ್ಳುವುದು, ಲಗ್ನಕ್ಕೆ ಬರುವ ಬೀಗರ ತೃಪ್ತಿಗಾಗಿ ತರತರಹದ ಸಿಹಿ, ಕಾರದ ತಿಂಡಿಗಳ ತಯಾರಿ, ನೆಂಟರಿಷ್ಟರ ಮನೆಯಿಂದ ಹಾಸಿಗೆ ದಿಂಬು, ಕಂಬಳಿ, ಜಮಖಾನೆಗಳನ್ನು ತಂದು ಒಟ್ಟಿಡುವುದು, ಅಡಿಗೆಗಾಗಿ ಪಾತ್ರೆಗಳನ್ನು ತಲಾಷ್ ಮಾಡಿ ಬೇರೆಡೆಯಿಂದಲಾದರೂ ತರುವುದು, ವಾಲಗದವರಿಗೆ ಮುಂದಾಗಿ ಆಹ್ವಾನ ಕೊಡುವುದು, ಲಗ್ನ ಮಾಡಿಸಲು ಪುರೋಹಿತರಿಗೆ ಆಮಂತ್ರಣ ಮುಂತಾಗಿ ತಯಾರಿ ನಡೆಯುತ್ತಿತ್ತು.

ಈಗಿನಂತೆ ಆಮಂತ್ರಣ ಪತ್ರಿಕೆ ಪ್ರತಿ ಅಚ್ಚು ಮಾಡುವುದು ರೂಢಿಯಲ್ಲಿರಲಿಲ್ಲ. ವಧೂ- ವರನ ಕಡೆಯವರು, ಪರಸ್ಪರ ಸಂಬಂಧ ಮಾಡಲು ಒಪ್ಪಿಗೆಯಾದ ನಂತರ, ನಿಶ್ಚಿತಾರ್ಥವೆಂಬ ಸಮಾರಂಭ ಏರ್ಪಡಿಸಿ, ಇದನ್ನು ಸಾಮಾನ್ಯವಾಗಿ ವಧುವಿನ ಮನೆಯಲ್ಲೇ ನೆರವೇರಿಸುವುದು ವಾಡಿಕೆ. ನಿಶ್ಚಯ ಕಾಲದಲ್ಲಿ ವಧೂ-ವರರ ನೆಂಟರಿಷ್ಟರ ಸಮಕ್ಷಮ ಲಗ್ನಕಾಲ ನಿಶ್ಚಯ ಮಾಡಿ, ಈ ರೀತಿ ಸಂಬಂಧಗಳು ಒಡಂಬಟ್ಟ ಬಗ್ಗೆ ಲಗ್ನಕ್ಕೆ ದಿನ ನಿಗದಿಪಡಿಸಿ, ಲಗ್ನಪತ್ರಿಕೆ ಬರೆಯಿಸಿ, ಮನೆದೇವರ ಸಮಕ್ಷಮ ಈ ಲಗ್ನಪತ್ರಿಕೆ ಇಟ್ಟು ಪೂಜಿಸಿ ಇದರಂತೆ ಲಗ್ನದ ಆಹ್ವಾನ ಪತ್ರಿಕೆ ಬರೆಯುವುದು ರೂಢಿ. ಇದರಂತೆ ಕಾರ್ಡಿನಲ್ಲಿ ಲಗ್ನಪತ್ರಿಕೆ ಬರೆದು ಆಹ್ವಾನಿಸಬೇಕಾದ ನೆಂಟರಿಷ್ಟರಿಗೆಲ್ಲಾ ಪೋಸ್ಟು ಮೂಲಕ ಟಪಾಲಿನಲ್ಲಿ ಕಳುಹಿಸುತ್ತಿದ್ದರು. ಈಗಿನಂತೆ ಮೆರುಗಿನ ದುಬಾರಿ, ಲಗ್ನಪತ್ರಿಕೆಗಳನ್ನು ಸಹಸ್ರಾರು ಪ್ರತಿಗಳಲ್ಲಿ ತಯಾರಿಸಿ, ಲಗ್ನಪತ್ರಿಕೆಯನ್ನು ರಥೋತ್ಸವ ಪತ್ರಿಕೆಯಂತೆ ಹಂಚುವ ಕ್ರಮವಿರಲಿಲ್ಲ.

ಲಗ್ನದ ಕೆಲವು ದಿವಸಗಳ ಮುಂಚೆ ಸಂಬಂಧಿಸಿದ ನೆಂಟರಿಷ್ಟರು ಬಂದು ಚಪ್ಪರ, ತೋರಣ ಮುಂತಾಗಿ ಎಲ್ಲ ಲಗ್ನದ ತಯಾರಿ ಕೆಲಸಗಳಲ್ಲೂ ಸ್ವಯಂ ಸಹಕರಿಸಿ ಸಂತೋಷವಾಗಿ ಮಾಡುತ್ತಾ, ಆನಂದದಿಂದಿರುತ್ತಾ, ಲಗ್ನದ ಸಮಾರಂಭ ಎದುರು ನೋಡುತ್ತಿದ್ದರು. ಇದರಂತೆ ಹೆಂಗಸರು, ನೆಂಟರಿಷ್ಟರೂ ಸಹಾ ಭಾಗವಹಿಸಿ, ಲಗ್ನದ ಮನೆಯ ತಿಂಡಿ- ತೀರ್ಥಗಳು, ಹಪ್ಪಳ-ಸಂಡಿಗೆಗಳ ತಯಾರಿ, ಭಕ್ಷಗಳ ತಯಾರಿಯಲ್ಲಿ ಭಾಗವಹಿಸುತ್ತಾ, ಈ ಹಗಲು ರಾತ್ರಿಗಳು ಲಗ್ನ ತಯಾರಿ ಮನೆಯ ಸಡಗರವೇ ತುಂಬಾ ಹರ್ಷದಾಯಕವಾಗಿದ್ದ ಕಾಲವದಾಗಿತ್ತು. ಲಗ್ನದ ದಿನ ಸಮೀಪಿಸಿದಂತೆಲ್ಲಾ, ಬೀಗರ ಬರುವಿಕೆಯನ್ನು ಇದಿರುನೋಡುತ್ತಾ ಸಂಭವನೀಯ ದಿವಸಗಳ ಸಂತೋಷವನ್ನು ಹಂಚಿಕೊಳ್ಳುತ್ತಾ ಲಗ್ನದ ತಯಾರಿ ನಡೆಯುತ್ತಿತ್ತು.

ಹತ್ತಿರ ಹತ್ತಿರದ ಸಂಬಂಧಗಳಲ್ಲಿ ಲಗ್ನವಾಗುತ್ತಿದ್ದ ಕಾರಣ, ಈಗಿನಂತೆ ರೈಲು, ಬಸ್ಸು, ಕಾರುಗಳ ಪ್ರಯಾಣ ದುರ್ಲಭವಾಗಿತ್ತು. ಬೀಗರು ಲಗ್ನ ಕಾಲಕ್ಕೆ ಸರಿಯಾಗಿ ಒಂದು ದಿನ ಮುಂಚೆ ಎತ್ತಿನಗಾಡಿಗಳಲ್ಲಿ ಬರುವುದೇ ಜಾಸ್ತಿ. ಗಾಡಿಗಳಲ್ಲಿ ವರನ ಗಾಡಿ ಮೊದಲಿದ್ದು ಹೂವು, ತೋರಣ, ಕಮಾನುಗಳಿಂದ ಅಲಂಕೃತವಾಗಿದ್ದರೆ, ಗಾಡಿ ಎಳೆಯುವ ಎತ್ತುಗಳು, ಗಾಡಿ ಹೊಡೆಯುವವನು ಸಹ ವೇಷಭೂಷಣಗಳಿಂದ ಕೂಡಿರುತ್ತಿದ್ದರು. ಬೀಗರು ಬಂದಕೂಡಲೇ ಸುಮಂಗಲಿಯರು, ವಧುವಿನ ಮನೆಯ ಹಿರಿಯ ವ್ಯಕ್ತಿಗಳು ಬೀಗರನ್ನು ವಾಲಗ- ಭಜಂತ್ರಿಗಳೊಡನೆ ಎದುರುಗೊಂಡು ಒಳಬರಲು ಆಹ್ವಾನಿಸಿ, ಔಪಚಾರಿಕ ಯೋಗಕ್ಷೇಮ ವಿಚಾರಿಸಿ, ತಿಂಡಿ ಬಿಸಿ ಮತ್ತು ತಣ್ಣನೆಯ ಕಷಾಯ, ಪಾನಕಗಳಿಂದ ತಣಿಸಿ, 'ಬೀಗರ ಮನೆ' ಎಂಬ ಪ್ರತ್ಯೇಕ ಬಿಡಾರಕ್ಕೆ (ಕೊಠಡಿ ಅಥವಾ ಮನೆಯ ಬೇರೆ ಯಾವುದಾದರೂ ಭಾಗಕ್ಕೆ) ಇವರಿಗೆ ಉಳಿಯಲು ಜಾಗ ತೋರಿಸುತ್ತಿದ್ದರು. 'ನಾಂದಿ ಶ್ರಾದ್ಧ' ವೆಂದು ಕರೆಯುವ ಕಾರ್ಯಕ್ರಮ, ಈ ಮೊದಲೇ ವರ ಮತ್ತು ವಧು ಕಡೆಯವರು ಪೂರೈಸಿಕೊಂಡೇ ಬರುತ್ತಿದ್ದರು ಅಥವಾ ಲಗ್ನಕ್ಕೆ ಮುಂಚೆ ಮಾಡಿಕೊಳ್ಳುತ್ತಿದ್ದರು.

ಲಗ್ನವೆಂದರೆ ಆ ಕಾಲದಲ್ಲಿ ನಾಲ್ಕೈದು ದಿನಗಳ ಕಾರ್ಯಕ್ರಮ. ಬೀಗರು ಬಂದ ರಾತ್ರಿ ದಿಬ್ಬಣ ಎದುರುಗೊಂಡು, ವಧು-ವರರ ಗೋತ್ರ ಪ್ರವರದೊಡನೆ ಇವರ ವಂಶಾವಳಿ ವಿವರಗಳೊಡನೆ, ಪುನಃ ಲಗ್ನ ಒಪ್ಪಂದದ ವಿವರಗಳನ್ನು ತಿಳಿಸಿ ವಧು-ವರರಿಗೆ ಪೂಜಿಸಿ, ಆರತಿ ಮಾಡಿ, ಗೌರವವಾಗಿ ಸಲ್ಲಬೇಕಾದ ಉಂಗುರ, ಹೊಸ ಬಟ್ಟೆಬರೆ ಪರಸ್ಪರ ಸಲ್ಲಿಸಿ, ಆ ದಿನದ ಕಾರ್ಯಕ್ರಮ ಪೂರೈಸಿ ರಾತ್ರಿ ಭೋಜನವಾದ ನಂತರ, ಒಂದು ದಿನದ ಕಾರ್ಯಕ್ರಮ ಖೈದಾಗುತ್ತಿತ್ತು.

ಎರಡನೇ ದಿವಸ ಕನ್ಯೆಯನ್ನು ಸಾಲಂಕೃತವಾಗಿ ವರನಿಗೆ ದಾನ ಮಾಡಿ ವಿವಾಹ ನೆರವೇರುವುದು. ಮೂರನೆಯ ದಿವಸ ಲಗ್ನ ಸಮಾರಂಭದ ಇತರೇ ಕೆಲಸ ಕಾರ್ಯಗಳು. ನಾಲ್ಕನೇ ದಿವಸ ನಾಗೋಲಿ ಶಾಸ್ತ್ರ.ಐದನೇ ದಿನ ವರನ ಕಡೆಯವರು ಅಂದರೆ ಗಂಡಿನ ಕಡೆಯವರು ಬಂದ ನೆಂಟರಿಷ್ಟರಿಗೆ ಭೋಜನ ಸಮಾರಂಭವನ್ನು ತಮ್ಮ ಖರ್ಚುವೆಚ್ಚಗಳಿಂದ ನೆರವೇರಿಸಿ ಸಂತರ್ಪಣೆ ಮಾಡುವುದು. ಈ ರೀತಿ ಸಂತರ್ಪಣೆಯಾದ ನಂತರ ಲಗ್ನ ಪೂರೈಸಿದಂತಾಗುತ್ತಿತ್ತು.

ಇಂತಹ ಸಡಗರ ಸಂಭ್ರಮದ ಲಗ್ನದ ಮನೆಗಳಲ್ಲಿಯೂ ಒಂದು ಅನಿವಾರ್ಯದ ತತ್ಕಾಲ ದುಃಖದ ಸನ್ನಿವೇಶವೂ ಇರುತ್ತಿತ್ತು. ಲಗ್ನವಾದ ಹೆಣ್ಣನ್ನು ಗಂಡನಿಗೋ, ಗಂಡನ ಮನೆಯವರಿಗೋ ಈಕೆಯ ಯೋಗಕ್ಷೇಮ ನೋಡಿಕೊಳ್ಳುವಂತೆ ಒಪ್ಪಿಸಿಕೊಡುವುದು. ಚಿಕ್ಕಂದಿನಿಂದ ಸಾಕಿ ಸಲಹಿ, ಮಗುವಿನ ಬೇಕು ಬೇಡಗಳ ಬಗ್ಗೆ ನಿಗಾವಹಿಸಿ, ಲಗ್ನವಾಗುವ ಕಾಲದಲ್ಲಿ ಯೋಗ್ಯ ವರನೆಂದು ಕಂಡ ಗಂಡನೊಡನೆ ವಿವಾಹ ಮಾಡಿ, ತೌರೂರಿನ ಸಂಬಂಧವನ್ನು ಅಪರೂಪ ಮಾಡಿ, ಯಾವುದೋ ಗಂಡು ಮಗಳನ್ನು ಮುಂದೆ ಚೆನ್ನಾಗಿ ಬಾಳಿಸಿಕೊಂಡು ಬರುತ್ತಾನೆಂಬ ನಂಬಿಕೆಯಿಂದ, ಅವನ ವಶಕ್ಕೆ ಶಾಶ್ವತವಾಗಿ ಒಪ್ಪಿಸಿಕೊಡುವ ಸನ್ನಿವೇಶ - ಯಾರಿಗಾದರೂ ತುಂಬಾ ದುಃಖದಾಯಕವಾಗಿಯೇ ಇದ್ದು, ಹೆಣ್ಣಿನ ಮನೆಯವರೆಲ್ಲಾ ಕಣ್ಣೀರು ಹಾಕುವ ದೃಶ್ಯ 'ಹೆಣ್ಣಿನ ಬಾಳು ಇಷ್ಟೇನೆ?' ಎಂಬ ತತ್ಕಾಲದ ವೈರಾಗ್ಯದ ಅಸಹನೀಯ ದೃಶ್ಯವಾಗಿ ಎಲ್ಲರ ಮುಖದಲ್ಲಿಯೂ ವ್ಯಸನ ಹೊರಹೊಮ್ಮುವುದನ್ನು ನೋಡಬಹುದು. ಇಲ್ಲಿ ಶ್ರೀಯುತ ವಿ.ಸೀಯವರ 'ಎಮ್ಮ ಮನೆಯಂಗಳದಲ್ಲಿ ಬೆಳೆದೊಂದು ಹೂವನ್ನು' ಕವನ (ಹಾಡು) ನೆನಪಿಸಿಕೊಳ್ಳಬೇಕು.

**ರೋಗರುಜಿನಗಳು ಮತ್ತು ಔಷಧಿ:** ಆರೋಗ್ಯ ಸಂಬಂಧ ಈಗಿನಷ್ಟು ಭ್ರಮೆಯೋ ಕಾಳಜಿಯೋ ಹಿಂದೆ ಇರಲಿಲ್ಲ. ಇದಕ್ಕೆ ಮಲೆನಾಡೂ ಹೊರತಾಗಿರಲಿಲ್ಲ. ಆಸ್ಪತ್ರೆಗಳೂ, ವೈದ್ಯರೂ ಈಗಿನಷ್ಟು ಹಳ್ಳಿ ಪಟ್ಟಣಗಳಲ್ಲಿರದಿದ್ದ ಕಾಲವದು. ಆದರೆ ಮಲೆನಾಡಿನವರು ವೈದ್ಯರಿಲ್ಲದೆ, ಔಷಧಿಗಳಿಲ್ಲದೆ ಬಹಳ ತೊಂದರೆ ಅನುಭವಿಸುತ್ತಿದ್ದರೆಂದರೆ, ಬಹುಜನರು ಸಾವು ಸಂಕಷ್ಟಗಳನ್ನು ಅನುಭವಿಸಬೇಕಿತ್ತು. ಹಾಗಾಗಲಿಲ್ಲ. ಮಲೆನಾಡಿನಲ್ಲಿ ನಾಟಿ ಔಷಧಿಯವರು - ಆಯುರ್ವೇದ ಗಿಡಮೂಲಿಕೆ ಔಷಧಿಗಳಲ್ಲಿ ಪಳಗಿದವರು ತಕ್ಕಷ್ಟು ಎಲ್ಲಕಡೆಯೂ ಇದ್ದರು. ಹಿಂದೆ ಮಲೆನಾಡಿನಲ್ಲಿ ತುಂಬಾ ಪ್ರಚಾರದಲ್ಲಿದ್ದು ತೊಂದರೆ ಕೊಡುತ್ತಿದ್ದ ಕಾಯಿಲೆ 'ಮಲೇರಿಯ ಜ್ವರ'. ಇದರಿಂದಾಗಿ ಜನರು ಜ್ವರಗಡ್ಡೆ ಮತ್ತು ಜ್ವರದಿಂದ ಬಳಲುವುದು ಜಾಸ್ತಿ ಇತ್ತು. ಆಗ ಇದಕ್ಕೆ ಆಕಾಶಕ್ಕೆ 'ಕ್ವಿನೈನ" ಎಂಬ ಮಾತ್ರೆ ತಯಾರಾಗಿ ಬಂತು. ಹಳ್ಳಿಗಳಲ್ಲಿ ಪ್ರಚಾರವಾಗಿ ಜನರು ಸೇವನೆ ಮಾಡುತ್ತಾ ಬಂದರು. ಕಾಲಕ್ರಮೇಣ ಮಲೇರಿಯ ಹತೋಟಿಗೆ ಬಂದು ಈಗ ತುಂಬಾ ಕಡಿಮೆಯಾಗಿದೆ. ಆದರೆ ಈಗ ಹೊಸ ಹೊಸ ಜ್ವರಗಳು ನಗರಗಳಲ್ಲಿ ಕಾಣಿಸಿಕೊಳ್ಳುತ್ತಿವೆ. ಆದರೆ ಇದ್ದಿದ್ದರಲ್ಲಿ ಮಲೆನಾಡು ಇಂದಿಗೂ ಕ್ಷೇಮಾರೋಗ್ಯದ ಹಾದಿಯಲ್ಲಿದೆ.

ಮಲೇರಿಯಾ ಜ್ವರ ಬಿಟ್ಟಲ್ಲಿ ಮಲೆನಾಡಿನಲ್ಲಿ ಆಗಾಗ ಬರುತ್ತಿದ್ದ ವಾಸಿಯಾಗುವಂತಹ ಚಿಕ್ಕ-ಚಿಕ್ಕ ತೊಂದರೆಗಳಿದ್ದವು. ಇವೆಲ್ಲ ಖಾಯಿಲೆ ಪರಿಹಾರಕ್ಕಾಗಿ ನಾಟಿ ಔಷಧಿ ಕೊಡುವ ಜನರೂ ಇದ್ದರು. ಮಲೆನಾಡಿನ ಹೆಂಗಸರು ಕೆಲವರು ಅಡಿಗೆಮನೆ ಸಾಸಿವೆ, ಜೀರಿಗೆ, ಮೆಂತ್ಯಗಳಲ್ಲೇ ಅನೇಕ ಸಣ್ಣ ಸಣ್ಣ ದೈಹಿಕ ತೊಂದರೆಗಳಿಗೆ ಔಷಧಿ ತಯಾರಿಸಿ ಕೊಡುವುದು ಈಗಲೂ ಇದೆ. ಹಲ್ಲು ನೋವು,

ಕಿವಿನೋವು, ಶೀತ, ಕೆಮ್ಮು, ಕಜ್ಜಿ, ಕುರ, ಮೈನವೆ, ಉಗುರುಸುತ್ತು, ಅಜೀರ್ಣ, ವಾಂತಿ ಮುಂತಾಗಿ ಸಣ್ಣ ಸಣ್ಣ ಅನಾರೋಗ್ಯಗಳಲ್ಲಿ ಅಲೋಪತಿ ಚಿಕಿತ್ಸೆ ತುಂಬಾ ಅಪರೂಪವಾಗಿತ್ತು. ಲೇಖಕನ ಚಿಕ್ಕಪ್ಪನವರೊಬ್ಬರು ಹಲ್ಲುನೋವೆಂದು ದವಡೆ ಬಾತುಕೊಂಡಿದ್ದಕ್ಕೆ ಬೆಳಿಗ್ಗೆ ಮುಂಚೆ ಬರಹೇಳಿ ಕಿವಿಗೆ ಏನೋ ಔಷಧ ಬಿಟ್ಟು ಶೀಘ್ರವಾಗಿ ಗುಣಪಡಿಸಿದ್ದರು.

ರೋಗಿಯಿಂದ ಜ್ವರವನ್ನು ತಮ್ಮಲ್ಲಿಗೆ ವರ್ಗಾಯಿಸಿಕೊಳ್ಳುವ ಯೋಗ್ಯ ವೈದ್ಯರೂ ಸಹಾ ಇದ್ದರು. ಕೊಪ್ಪ ತಾಲ್ಲೂಕು ಮೆಗುಂದ ಹೋಬಳಿ ಗೊಳಜಟ್ಟನೇಭಿ ಎಂಬ ಊರಿನಲ್ಲಿ ಬಿಷ್ಟಪ್ಪಯ್ಯನೆಂದು ಹೆಸರಿರುವ ಪ್ರಸಿದ್ಧ ಯೌಗಿಕ ಶಕ್ತಿ ಸಹಾ ಇದ್ದ ಆಯುರ್ವೇದ ವೈದ್ಯರೊಬ್ಬರಿದ್ದರು. ಜನರು ಅವರು ವೈದ್ಯ ಮತ್ತು ವ್ಯವಸಾಯ ವೃತ್ತಿಯವರಾಗಿ, ಮಲೆನಾಡು ಹಳ್ಳಿಯ ಅನೇಕ ಜನರಿಗೆ ವೈದ್ಯರಾಗಿ ಅನೇಕ ಅಸಾಧಾರಣ ಖಾಯಿಲೆಗಳನ್ನು ಗುಣಪಡಿಸಿದ ಪ್ರಖ್ಯಾತ ಆಯುರ್ವೇದ ವೈದ್ಯರಾಗಿದ್ದರು. ಅದರಲ್ಲಿಯೂ, ಹಳ್ಳಿಗಳಲ್ಲಿಯೂ ಅವರಿಗೆ ಜನಸಂಪರ್ಕ ಚೆನ್ನಾಗಿದ್ದು ಪ್ರತಿಯೊಬ್ಬರೂ ಅವರಲ್ಲಿ ನಾನಾ ವಿಧ ಖಾಯಿಲೆಗಳಿಗೆ ಔಷಧಿ ಪಡೆದು ಗುಣಮುಖರಾಗುತ್ತಿದ್ದರು. ಅವರು ಕೊಟ್ಟ ಔಷಧಿಗೆ ಪ್ರತಿಯಾಗಿ ಏನನ್ನೂ ಸ್ವೀಕರಿಸುತ್ತಿರಲಿಲ್ಲ. ಮಾನವ ಸೇವೆ ಎಂದು ಮಾಡುತ್ತಿದ್ದರು.

ಒಂದು ಸಾರಿ ಬಾಲ್ಯದಲ್ಲಿ ಈ ಲೇಖಕನಿಗೆ ತುಂಬಾ ಜ್ವರ ಬಂದು ಜಾಸ್ತಿಯಾಗಿ ಮೂರ್ಛೆ ಹೋಗುವ ಸ್ಥಿತಿಯಲ್ಲಿದ್ದನಂತೆ. ಲೇಖಕನ ತಂದೆಯವರಿಗೆ ತುಂಬಾ ಗಾಬರಿಯಾಗಿ, ಪಕ್ಕದ ಮನೆಯಲ್ಲೇ ಇದ್ದ ಸರ್ಕಾರಿ ಅಲೋಪತಿ ಡಾಕ್ಟರು ಬಂದು ನೋಡಿ ಕಾದು ನೋಡೋಣವೆಂದು ತಿಳಿಸಿದರಂತೆ. ಆ ಹೊತ್ತಿಗೆ ಸರಿಯಾಗಿ ಎಲ್ಲಿಂದಲೂ ಈ ಯೋಗಿ ನೇಭಿ ಬಿಷ್ಟಪ್ಪಯ್ಯನವರ ಆಗಮನವಾಯ್ತು. ಲೇಖಕನ ತಂದೆಯವರಿಂದ ಕೂಲಂಕುಶ ವಿಚಾರ ತಿಳಿದು, ತೋಟದಲ್ಲಿ ಅಣೆಕಟ್ಟಿನಲ್ಲಿ ನೀರು ಇದೆಯೋ ಎಂದು ಕೇಳಿದರಂತೆ. ಅದು ಬೇಸಿಗೆ ಕಾಲ. ತೋಟದ ನೀರಿಗಾಗಿ ಮಲೆನಾಡಿನಲ್ಲಿ ನೀರಾಶ್ರಯದಿಂದ ಸಣ್ಣದಾಗಿ ಬರುವ ನೀರನ್ನು ತೋಟದ ತಂಪಿಗಾಗಿ ಅಣೆಕಟ್ಟು ಅಡ್ಡಹಾಕಿ ನೀರು ನಿಲ್ಲಿಸಿರುತ್ತಾರೆ. ಹೌದೆಂದು ತಂದೆಯವರಿಂದ ಉತ್ತರ ಬಂದ ಕೂಡಲೇ ಒಂದು ಕಂಬಳಿ ಕೊಡಿ ಎಂದು ತಿಳಿಸಿ 'ನಾನು ಎದ್ದುಬಂದು ನಾನಾಗಿಯೇ ಮಾತನಾಡುವವರಿಗೆ ಯಾರೂ ನನ್ನೊಡನೆ ಮಾತನಾಡಬಾರದ' ಎಂಬ ಶರತ್ತು ಮೇರೆಗೆ ಲೇಖಕ ಮಲಗಿದ್ದ ರೂಮಿನಲ್ಲಿ ಲೇಖಕನನ್ನು ತಮ್ಮ ಕಂಬಳಿಯೊಳಗೆ ತೆಗೆದುಕೊಂಡು ಕೊಠಡಿ ಬಾಗಿಲು ಹಾಕಿಕೊಂಡರಂತೆ. ಅಂದಾಜು ಒಂದು ಘಂಟೆ ಮೇಲೆ ಎದ್ದು ಸೀದಾ ತೋಟದ ಅಣೆಕಟ್ಟಿಗೆ ಹೋಗಿ (ನೀರಿನಲ್ಲಿ ಜ್ವರ ಬಿಟ್ಟು) ಸ್ನಾನ ಮಾಡಿ ಬಂದರಂತೆ. ಇಲ್ಲಿ ನೋಡಿದರೆ ಲೇಖಕನಿಗೆ ಜ್ವರವಿಲ್ಲ! ಮಲಮೂತ್ರಗಳು ಸ್ವಾಭಾವಿಕವೆಂಬಂತೆ ತಮ್ಮ ಕೆಲಸ ಮಾಡಿವೆ! ಎಲ್ಲರಿಗೂ ಮನೆಯಲ್ಲಿ ಆಶ್ಚರ್ಯವೋ ಆಶ್ಚರ್ಯ! ಇದು ಲೇಖಕನಿಗೆ ಇವನ ತಂದೆಯವರಿಂದ ತಿಳಿದ ಸುದ್ದಿ. ಲೇಖಕನು ದೊಡ್ಡವನಾದಾಗ ಸದ್ರಿ ಭಿಷ್ಟಪ್ಪಯ್ಯನವರು ತೀರಿಕೊಂಡಿದ್ದರು. ಅವರ ಮಗ ಪಂಡಿತ ಕೃಷ್ಣರಾಯರೂ ಸಹ ಪ್ರಸಿದ್ಧ ಆಯುರ್ವೇದ ವೈದ್ಯರಾಗಿದ್ದರು. ಈ ವಿಷಯ ಅವರಲ್ಲಿ ಲೇಖಕ ಹೇಳಿದಾಗ , ಈ ಯೌಗಿಕ ಶಕ್ತಿ ಅವರ ತಂದೆಯಲ್ಲಿದ್ದುದು ಹೌದೆಂದು ತಿಳಿಸಿದರಲ್ಲದೆ, ಈ ರೀತಿ ಅನೇಕ ಕಡೆ ಯೌಗಿಕ ಪ್ರಯೋಗದಿಂದ ಗುಣಪಡಿಸಿದ ವಿಷಯ ಸಹಾ ಹೇಳಿದರು.

ಇನ್ನೊಂದು ದೃಷ್ಟಾಂತ ಉಲ್ಲೇಖಿಸುತ್ತೇನೆ. ಈಗ ಸುಮಾರು 40 ವರ್ಷಗಳ ಹಿಂದೆ ಲೇಖಕನ ನೆಂಟರೊಬ್ಬರಿಗೆ ಅನಾರೋಗ್ಯವಾಗಿ, ಮೂತ್ರದಲ್ಲಿ ರಕ್ತ ಬರೆದು ಪ್ರಾರಂಭವಾಯ್.ತು ಯಾವುದೇ ಔಷಧಗಳಿಂದಲೂ ಕಡಿಮೆಯಾಗದೆ ಅವರು ತುಂಬಾ ಗತಪ್ರಾಣ ಸ್ಥಿತಿಗೆ ಬಂದರು. ಈ ರೋಗಿಯ ದೂರದ ಸಂಬಂಧಿ ಇವರ ಚಿಕ್ಕಪ್ಪ (ಕಕ್ಕ)ನವರೂ ಪ್ರಸಿದ್ಧ ಆಯುರ್ವೇದ ವೈದ್ಯರು. ಅವರಿಗೆ ಈ ವರ್ತಮಾನ ಹೋಗುತ್ತಿದ್ದಂತೆ, ಅವರು ಬಹುದೂರದಿಂದ ಬಸ್ಸೋ ಗಾಡಿಯೋ ಮಾಡಿಕೊಂಡು ಬಂದರು. ಬಂದು ರೋಗಿಯನ್ನು ನೋಡಿ, ಹಾಗೆಯೇ ಕಾಡಿನ ಕಡೆ ಹೋಗಿ ಕೆಲವು ಗಿಡಮೂಲಿಕೆಗಳನ್ನು ತಂದು ಅಕ್ಕಿಗಂಜಿಯೊಡನೆ ಬೇಯಿಸಿ, ರೋಗಿಗೆ ಕೊಡಲು ತಿಳಿಸಿದರು. ಹಾಗೆಯೇ ಮಾಡಿದಾಗ, ಗಂಜಿ ನಾಲ್ಕಾರು ಬಾರಿ ಕುಡಿದ ರೋಗಿ ಮಾರನೇ ದಿನಕ್ಕೆ ಶುದ್ಧ ಮೂತ್ರ ಮಾಡಿ ಆರಾಮಾದರು. ತದನಂತರ ಆ ರೋಗಿ ಅನೇಕ ವರ್ಷ ಬಾಳಿ ಬದುಕಿದ್ದರು. ಔಷಧಿ ಕೊಟ್ಟ ವೈದ್ಯರು ಧನ್ವಂತರಿ ಶ್ರೀ ಹೊಸಬಾಳೆ ನಂಜುಂಡ ರಾಯರು.


ಇಷ್ಟೆಲ್ಲಾ ಉಲ್ಲೇಖಿಸಲು ಕಾರಣವೇನೆಂದರೆ, ಈ ರೀತಿ ಪ್ರಸಿದ್ಧ ಆಯುರ್ವೇದ ಮತ್ತು ಯೋಗಿ ವೈದ್ಯರು ಹಿಂದೆ ಮಲೆನಾಡಿನಲ್ಲಿ ಇದ್ದರು ಎಂಬ ನಿದರ್ಶನ ಮತ್ತು ಸಾಕ್ಷಿಗಾಗಿ.

'ಉಳುಕು ಮಂತ್ರಿಸುವುದು' ಎಂಬ ಪ್ರಯೋಗ ಒಂದಿತ್ತು. ಅಂದರೆ ಯಾರಿಗಾದರೂ ಹೆಜ್ಜೆ ಉಳುಕಿದರಾಗಲೀ, ಸೊಂಟ ಅಥವಾ ದೇಹದ ಯಾವ ಭಾಗವಾದರೂ ನರ ತೊಡಕಿನಿಂದ ತೀರಾ ಬಾಧೆ ಉಂಟಾಗಿದ್ದರೆ ಕೇವಲ ಎಣ್ಣೆ ಸವರುವುದರಿಂದಲೋ ಅಥವಾ ಯಾವುದೋ ಗಿಡಮೂಲಿಕೆ ಕಡ್ಡಿ ತಂದು, ಆ ಕಡ್ಡಿಯನ್ನು ಉಳುಕಿದ ಭಾಗಕ್ಕೆ ಸೋಕಿಸುತ್ತಾ ಬಂದು, ಶೀಘ್ರವಾಗಿ ಉಳುಕು ನೋವನ್ನು ಮಾಡುವವರಿದ್ದರು. ಇದನ್ನು ಲೇಖಕನೇ ನೋಡಿರುವುದಲ್ಲದೆ, ಅನುಭವಿಸಿದ್ದಾನೆ.

**(ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು)**

# ಆಚೆ

(ಉಮಾ ರಾವ್ ಕಥೆಗಳು) ✎ **ಉಮಾ ರಾವ್**



ಮೊದಲನೇ ಮಹಡಿಯ ತನ್ನ ಮನೆಯ ಕಿಟಕಿಯಿಂದ ದೂರ ದಿಗಂತದಲ್ಲಿ ದೃಷ್ಟಿ ನೆಟ್ಟು ಕುಳಿತಿದ್ದ ಶಾಲಿಮಾ ಮಟ ಮಟ ಮಧ್ಯಾಹ್ನ ೨ ಗಂಟೆಗೆ ಇದ್ದಕ್ಕಿದ್ದಂತೆ ಕತ್ತಲಾದಾಗ ಬೆಚ್ಚಿದಳು. ಎಣ್ಣೆಯಂಗಡಿಯ ಪಾಂಡೆ, ಲಕ್ಷ್ಮೀ ಹಾರ್ಡ್ ವೇರ್ ಸ್ಟೋರ್ಸ್ ಶೆಟ್ಟಿ, ಕೋಳಿ ಕತ್ತರಿಸಲು ಆಗ ತಾನೇ ಅದರ ಕತ್ತಿಗೆ ಕೈ ಹಾಕಿದ್ದ ಲಾಲಾ, ರಂಗುಗಲ್ಲಿಯ ಅಕ್ಕಸಾಲಿಗ ಆಚಾರಿ, ಸೇಂಟ್ ಝೇವಿಯರ್ ಕಾಲೇಜಿನ ಚರಿತ್ರೆ ಕ್ಲಾಸಿನಲ್ಲಿ ತೂಕಡಿಸುತ್ತಿದ್ದ, ಹರಟೆ ಕೊಚ್ಚುತ್ತಿದ್ದ, ಚೆಲ್ಲು ಬಡಿಯುತ್ತಿದ್ದ ಹುಡುಗ ಹುಡುಗಿಯರು, ಸುರ್ಮಾ ಸಾಬೂನಿಗಾಗಿ ಮಾರ್ಕೆಟಿಂಗ್ ಸರ್ವೆ ನಡೆಸುತ್ತಿದ್ದ ತೋಪ್ರಾನಿ, ಬಚ್ಚುವಿಗೆ ಹಾಲೂಡಿಸುತ್ತಿದ್ದ ಜಲಜ, ಕೆಂಪು ಮಾರುತಿಯನ್ನು ೧೧೦ಂಲ ಮೇಲೆ ಓಡಿಸಲು ಪ್ರಯತ್ನಿಸುತ್ತಿದ್ದ ಎಕ್ಸ್ ಪೋರ್ಟ್ -ಇಂಪೋರ್ಟ್ ಬಂಟಿ, ತನ್ನ ಬ್ಯಾಕ್ ಹ್ಯಾಂಡ್ ಪಕ್ಕಾ ಮಾಡಿಕೊಳ್ಳುತ್ತಿದ್ದ ಟೆನಿಸ್ ಚಾಂಪಿಯನ್ ರಾಜೇಶ್ ದಾರೂವಾಲಾ, ಕಣ್ಣಿಗೆ ಕಾಡಿಗೆ ತೀಡಿಕೊಳ್ಳುತ್ತಿದ್ದ ಸುಶ್ಮಾ, ಸಾವಿಗಾಗಿ ಕಾಯುತ್ತಾ ಮಲಗಿದ್ದ ಸೀನಪ್ಪ, ಇತ್ಯಾದಿ ಇತ್ಯಾದಿ ಸಾವಿರಾರು ಲಕ್ಷಾಂತರ ಕೋಟ್ಯಾಂತರ ಜನ ಬೆಚ್ಚಿದರು, ಬೇರೆ ಬೇರೆಯಾಗಿ.

ಸ್ವಲ್ಪ ಹೊತ್ತು ಶಾಲಿಮಾಗೆ ಏನು ತೋಚಲಿಲ್ಲ. ಇದೇನು? ದೊಡ್ಡ ವಿಮಾನವೊಂದು ಸೂರ್ಯನಿಗೆ ಅಡ್ಡ ಬಂದು ಹೀಗಾಯಿತೆ? ಆದರೆ ಹೀಗೆ ಕತ್ತಲಾಗುವುದೆಂದರೇನು? ಹಾಗಾದರೆ ಯಾವುದಾದರೂ ಬೇರೆ ಗ್ರಹದಿಂದ ಹಾರುವ ತಟ್ಟೆ ಏನಾದರೂ ಬಂದು ಸೂರ್ಯನನ್ನು ಮರೆ ಮಾಡಿತೇ? ಅಥವಾ ಚಿಕ್ಕಂದಿನಲ್ಲಿ ಯಾವುದೋ ಕಥೆಯಲ್ಲಿ ಓದಿದಂತೆ ರಾಕ್ಷಸನೇನಾದರೂ ಸೂರ್ಯನನ್ನು ನುಂಗಿ ಹಾಕಿದನೇ? ಕೋಪಗೊಂಡ ಋಷಿ ಏನಾದರೂ ತಣ್ಣಗಾಗಿಸಿದನೇ? ಆಟಂ ಬಾಂಬ್ ಸ್ಫೋಟವಾಯಿತೆ? ಏನೇ ಆಗಿರಲಿ ಸ್ವಲ್ಪ ಕಾಲ ತಾನೇ? ಹೌದು ಸ್ವಲ್ಪ ಕಾಲ ಮಾತ್ರ ಹೀಗಾದರರೇನಂತೆ? ಈ ಕತ್ತಲೇನು ನಿರಂತರವಲ್ಲ.....ಮತ್ತೆ ಬೆಳಕಾಗುವುದಲ್ಲ.... ಇದೆಲ್ಲ ಸ್ವಲ್ಪ ಕಾಲ.... ಹೌದು ಸ್ವಲ್ಪ ಕಾಲ ಮಾತ್ರ.... ಆ ಯೋಚನೆ ಮನಸ್ಸಿಗೆ ಬಂದಂತೆ ಕೊಂಚ ಹಾಯೆನಿಸಿತು. ಆದರೆ ನಿಮಿಷಗಳು ಉರುಳಿ ಸಮಯ ಜಾರಿದಂತೆ ನಿಧಾನವಾಗಿ ಕಸಿವಿಸಿ ಹೆಚ್ಚಾಯಿತು. ಪಕ್ಷಿಗಳು ಸಂಜೆ ಎಂದು ಭಾವಿಸಿ, ಗೂಡಿಗೆ ಮರಳಿ ಚಿಲಿಪಿಲಿ ಗುಟ್ಟ ತೊಡಗಿದಾಗ, ಮೊದಲು ಅನುಮಾನ, ನಂತರ ಹಾಗೆ ಇದು ಬೆಳಕಿಗೆ ದಾರಿ ಮಾಡಿ ಕೊಡುವ ಕತ್ತಲಲ್ಲ ಎಂಬ ಅರಿವು ಮೂಡಿತು. ಅಂತೆ ಒಂದು ವಿಲಕ್ಷಣ ಭಯ ಶಾಲಿಮಾಳನ್ನು ಅಲ್ಲಿ ಇಲ್ಲಿ ಎಲ್ಲಾ ಜನರನ್ನು ಗಕ್ಕನೆ ಹೊಡೆಯಿತು. ಆ ಕ್ಷಣ ಯಾರೂ ಹಿಂದೆಂದೂ ಕಾಣದ ಕೇಳದ ಹುಚ್ಚು ಆತಂಕ ಶುರುವಾಯಿತು.

ಜನ ದೀಪಗಳನ್ನು ಹಚ್ಚಿದರು. ರಸ್ತೆಗೆ ಓಡಿದರು. ಮೊಂಬತ್ತಿಗಳನ್ನು ಡಜನಗಟ್ಟಲೆ ಕೊಂಡರು. ಮನೆಯಲ್ಲಿ ನೀರು ತುಂಬಿಸಿಟ್ಟರು. ಒಬ್ಬರು ಇನ್ನೊಬ್ಬರೊಡನೆ ಜೋರಾಗಿ ಮಾತಾಡಿದರು.... ತಮ್ಮನ್ನು ಮುತ್ತತೊಡಗಿದ್ದ ಭಯದ ಯೋಚನೆಗಳ ಸದ್ದಡಗಿಸುವ ಪ್ರಯತ್ನದಲ್ಲಿ. ಅಕ್ಕಪಕ್ಕದವರಿಗೆ, ದೂರ ದೂರುಗಳಿಗೆ, ಪರದೇಶಗಳಿಗೆ ಫೋನ್ ಮಾಡತೊಡಗಿದರು. ತಮಗೆ ಮಾತ್ರ ಹೀಗಾಗಿಲ್ಲ, ಎಲ್ಲರಿಗೂ ಹೀಗಾಗಿದೆ ಎಂಬ ವಿಲಕ್ಷಣ ಸಮಾಧಾನದ ಜಾಡಿನಲ್ಲಿ ರೇಡಿಯೋ, ಟಿವಿ ತಿರುಗಿಸಿದರು. ಸ್ವಲ್ಪ ಹೊತ್ತಿನಲ್ಲಿ ಫೋನ್ ಕೊರಕೊರವೆಂದು "ಮೇ ಐ.... ಕುಡ್... ಐ... ಮೈ ಐ ಬುಕ್" ತಡತವರಿಕೆಗೆ ಮೌನವೇ ಉತ್ತರವಾಗಿ ಧ್ವನಿ ಫೋನಿನಲ್ಲೇ ಅಡಚಿ ಹೋದಾಗ ತತ್ತರಿಸಿ ಹೋದರು. ನೆಲದ ಮೇಲೆ, ಹಾಸಿಗೆಯಲ್ಲಿ, ಬ್ಯೂಟಿ ಪಾರ್ಲರ್ ಗಳ ಆರಾಮ ಕುರ್ಚಿಗಳ ಮೇಲೆ, ಕಾರುಗಳಲ್ಲಿ, ಬಸ್ಸುಗಳಲ್ಲಿ, ರೈಲುಗಳಲ್ಲಿ, ಟ್ರಕ್ಕುಗಳಲ್ಲಿ. ಡೆಂಟಿಸ್ಟ ನ ವರೆಗೆ ಟೈಪರೈಟರ್ ಗಳ ಮುಂದೆ. ಬೆತ್ತಲಾಗಿ ಬಚ್ಚಲು ಮನೆಗಳಲ್ಲಿ ಮುರುಕಲು ಪಾರ್ಕು ಬೇಂಚುಗಳ ಮೇಲೆ, ಕಂಪ್ಯೂಟರ್ ಗಳ ಎದುರಿಗೆ, ಫೋನ್ ರಿಸೀವರ್ ಗಳಲ್ಲಿ, ಪೊಲೀಸ್ ಠಾಣೆಗಳಲ್ಲಿ, ಹೋಟೆಲ್ ಟೇಬಲ್ ಗಳ ಮಸಾಲೆ ದೋಸೆಗಳ ಮೇಲೆ ಮಾರ್ಕೆಟ್ಟಿನ ತರಕಾರಿ ಬುಟ್ಟಿಗಳಲ್ಲಿ ಅಲ್ಲಿ ಇಲ್ಲಿ.

ಶಾಲಿಮಾ ಕುಳಿತಲ್ಲಿಂದಲೇ ಎಲ್ಲವನ್ನು ಕಂಡಳು. ಜನ ಆಫೀಸಿನಿಂದ ಹೊರಟಂತೆ ಓಡತೊಡಗಿದ್ದನ್ನು. ಊರಿನ ಬಸ್ಸುಗಳು, ಟ್ಯಾಕ್ಸಿಗಳು, ಕಾರುಗಳು, ಟ್ರಕ್ಕುಗಳು ತುಂಬಿ ಹರಿದಂತೆ ವಾಹನಗಳನ್ನು ನಿಲ್ಲಿಸಿ ಒಳಗೆ ಕೂತವರನ್ನು ಹೊರಗೆಡೆದು ಹಾಕಿ ತಾವೇ ಹತ್ತಿಕೊಂಡು ಹೋದದ್ದನ್ನು. ಪಕ್ಕದ ಮನೆಯ 80 ವರ್ಷದ ಕಾಸಿಂ ಗಟ್ಟಿಯಾಗಿ ದೇವರನ್ನು ಪ್ರಾರ್ಥಿಸತೊಡಗಿದ್ದನ್ನು. ಎದುರು ಮನೆಯ ತುಂಗಾಬಾಯಿಯ ನೆಚ್ಚಿನ ಹಳೆಯ ನೌಕರ ಚೋಟು ಅವಳ ಹೊಟ್ಟೆಗೆ ಚೂರಿ ಇಟ್ಟು ಕತ್ತಿನಲ್ಲಿದ್ದ ಎಂಟು ತೋಲದ ಚೈನು ಕಿತ್ತುಕೊಂಡು ಓಡಿ ಹೋದದ್ದನ್ನು. ಧಾರಾವಿ ಕೊಳಗೇರಿಯಲ್ಲಿ ಬೇನೆ ತಿನ್ನುತ್ತಿದ್ದ ಮಾಲಾಳ ದೇಹದಿಂದ ಅರ್ಧ ಹೊರ ಬಂದಿದ್ದ ಮಗು ಹಾಗೆ ಜೋತಾಡುತ್ತಿರುವುದನ್ನು. ಎದುರು ಮನೆಯ ನರಪೇತಲ ಅಡಿಗೆಯವ ಮೋತಿ ತನ್ನ ಬುಡ್ಡ ಸಾಹೇಬನಿಗಾಗಿ ತಯಾರಿಸಿದ್ದ ಅಷ್ಟು ಬಟರ್ ಚಿಕನನ್ನು ಒಂದೇ ಏಟಿಗೆ ಗುಳುಂ ಎನ್ನಿಸಿದ್ದನ್ನು. ಉದ್ವೇಗದಿಂದ ಏದುತ್ತಾ ಮಲಗಿದ್ದ ರಾಣಿಯನ್ನು ಶಾಮ ಹಾಗೆಯೇ ಹಾಸಿಗೆಯಲ್ಲಿ ಬಿಟ್ಟು ಕಾಮಾಟಿಪುರದ ಗಲ್ಲಿಯಿಂದ ಕಾಲು ಕಿತ್ತಿದ್ದನ್ನು, ನರ್ಸ್ ಗಳು ರೋಗಿಗಳನ್ನು ಬಿಟ್ಟು ಆಸ್ಪತ್ರೆಯಿಂದ ಓಡುತ್ತಿರುವುದನ್ನು, ಚಕ್ರವರ್ತಿ ಮೌರ್ಯದ ಪೈಲೆಟ್ ತನ್ನ ವಿಮಾನವನ್ನು ದಾದರ ಜನಸಂದಣಿಯಲ್ಲಿ ಇಳಿಸಿದ್ದನ್ನು, ಜನ ಚದುರಿ ಛಿದ್ರ, ಛಿದ್ರವಾದದ್ದನ್ನು...

ಪಕ್ಕದ ಗಲ್ಲಿಯ ಡೆಂಟಿಸ್ಟ ಚಿಂಗ್ ಚಾಂಗ್ ಬಚ್ಚಲು ಮನೆಯಿಂದ ಸೋಪಿನ ನೊರೆಯೊಂದಿಗೆ ಬೀದಿಗೆ ಓಡಿ ಬಂದದ್ದನ್ನು, ಪೊಲೀಸ್ ಪೇದೆಯೊಬ್ಬ ಬಂದೂಕೆಸೆದು "ಅಮ್ಮ... ಅಮ್ಮ.....ಎಂದು ಚೀರತೊಡಗಿದ್ದನ್ನು....

ಸ್ಕೂಲಿನ ಮಕ್ಕಳು ಛುಟ್ಟಿ ಛುಟ್ಟಿ ಎಂದು ಸಂತಸದಿಂದ ಚಪ್ಪಾಳೆ ತಟ್ಟುತ್ತಾ ಕುಣಿಯುತ್ತಿರುವುದನ್ನು, ಅಣು ಕೇಂದ್ರದ ತಾಂತ್ರಿಕನೊಬ್ಬ ಎಲ್ಲಾ ಹಾಗೆ ಬಿಟ್ಟು ಕಂಟ್ರೋಲ್ ರೂಮಿನಿಂದ ಮೆಲ್ಲನೆ ಜಾರಿಕೊಂಡಿದ್ದನ್ನು, ಬೋಲ್ಡ್ ರೂಮಿನ

ಮೀಟಿಂಗ್ ನಲ್ಲಿದ್ದ ಲಾಲ್ ವಾನಿಯ ಕೈ ನಡುಗಿ ನೀಲಿ ಸಫಾರಿ ಸೂಟಿನ ತುಂಬಾ ಚಾಯ್ ಚೆಲ್ಲಿಕೊಂಡಿದ್ದನ್ನು, ಹೆಂಡದ ಅಂಗಡಿಯ ರಾಜ ತಾನೆ ಬಾಟಲು ಗಟ್ಟಲೆ ಸೀದಾ ಕುಡಿಯುತ್ತಾ ಗಹಗಹಿಸಿ ನಗತೊಡಗಿದ್ದನ್ನು, ಪಾರ್ಕಿನಲ್ಲಿ ಮಲಗಿದ್ದ ಕುಡುಕ, ತಾನು ಬೆಳಿಗ್ಗೆ ಎಂದ್ದುಕೊಂಡಿದ್ದು ತಪ್ಪು, ಇನ್ನೂ ರಾತ್ರಿಯ ಎಂದು ದೇವರಿಗೆ ವಂದಿಸಿ ಮತ್ತೇ ನಿದ್ದೆ ಹೋದದ್ದನ್ನು, ಕಾಳಿಗುಡಿಯ ಅರ್ಚಕ ಗರ್ಭಗುಡಿಯ ಬಾಗಿಲು ಭದ್ರಪಡಿಸಿ ಸಂಸಾರ ಸಮೇತ ದೇವಿಯ ಹಿಂದೆ ಅವಿತ್ತಿಟ್ಟುಕೊಂಡಿದ್ದನ್ನು, ನೈವೇದ್ಯಕ್ಕೆ ಬಂದ ಹಣ್ಣಷ್ಟನ್ನು ತನ್ನ ಮಕ್ಕಳಿಗೆ ಗಬ-ಗಬ ಹಂಚಿದ್ದನ್ನು......

ತಟ್ಟನೆ ತಬ್ಬಲಿ ಆದ ಕಂಪ್ಯೂಟರ್ ಗಳು ಅವಕ್ಕಾದುದನ್ನು, ಓಡಿ ಹೋಗಿ ಮದುವೆಯಾಗುವ ಕನಸು ಕಾಣುತ್ತಿದ್ದ ಎಳೆ ಪ್ರೇಮಿಗಳು ಪ್ರೇಮ್ ಸುಮಾ ಒಬ್ಬರನ್ನೊಬ್ಬರು ತಬ್ಬಿ, ಬಿಕ್ಕಿಬಿಕ್ಕಿ ಅಳತೊಡಗಿದ್ದನ್ನು, ತನ್ನ ಎದುರಾಳಿಗಳಿಗೆ ಮಣ್ಣು ಮುಕ್ಕಿಸಲು ಕೈಯೆತ್ತಿದ ವಿಶ್ವವಿಖ್ಯಾತ ಕುಸ್ತಿಪಟು ಚಾರ್ಲಸ್ ರೊನಾಲ್ಡ್ ಅವನನ್ನು ಹಾಗೆ ತಬ್ಬಿಕೊಂಡಿದ್ದನ್ನು, ಅವನ ಕಣ್ಣಂಚಿನಲ್ಲಿನ ಕಂಬನಿಯನ್ನು......

ಆರು ವರ್ಷದ ಮನು ತನ್ನ ಕೈಯಲ್ಲಿದ್ದ ಬಣ್ಣದ ಗಾಳಿಪಟವನ್ನು ಕಪ್ಪು ಕತ್ತಲಿಗೆ ಜಾರ ಬಿಟ್ಟು ಮನೆಯತ್ತ ಓಡತೊಡಗಿದ್ದನ್ನು, ತೆಂಗಿನ ಮರದ ತುತ್ತ ತುದಿಯಲ್ಲಿ ಕಾಯಿ ಕಿತ್ತಲು ಕೈ ಹಾಕಿದ್ದ ಚೀನಿ ಅಲ್ಲಿಂದ ಜಾರಿ ದಡ್ಡನೆ ಬಿದ್ದು ಸತ್ತದ್ದನ್ನು, ಅವನ ರಕ್ತ ಹರಿದು ನಿಧಾನವಾಗಿ ಹೆಪ್ಪುಗಟ್ಟ ತೊಡಗಿದ್ದನ್ನು...

ಹಿಂದೆಯೇ ಆಗ ತಾನೆ ಶಾಲೆಯಿಂದ ಹಿಂದುರುಗಿದ ತನ್ನ ಮಕ್ಕಳು ರಾಜು, ನೀನಾ ಎದುರು ಬದುರಾಗಿ ನಿಂತಿದ್ದನ್ನು, ರಾಜು ನೀನಾಳ ಹೆಗಲ ಮೇಲೆ ಕೈ ಹಾಕಿ ಕ್ಷೀಣ ದನಿಯಲ್ಲಿ "ನೀನಾ, ಈಗ ನನಗೆ ನಿನ್ನೊಡನೆ ಮಲಗಬಿಡು ನನ್ನನ್ನು ಪ್ರೀತಿಸಬಿಡು... ಐ ವಾಂಟ್ ಟು ನೋ ವಾಟ್ ಇಟ್ ಇಸ್ ಟು ಮೇಕ್ ಲವ್... ನನಗೆ ಹಾಗೆ ಸಾಯಲು ಇಷ್ಟವಿಲ್ಲ....." ಎಂದು ಗೋಗರಿಯುತ್ತಿರುವುದನ್ನು, ನೀನಾಳ ಕಣ್ಣುಗಳಲ್ಲಿ ಶತಮಾನಗಳಿಂದ ಹೆಪ್ಪುಗಟ್ಟಿದ ಭಯವನ್ನು, "ನೀನಾ....ನೀನಾ..." ರಾಜು ನ ಧ್ವನಿ ಗೊಗ್ಗರಾದಂತೆ ನೀನಾ ತನ್ನ ಬಟ್ಟೆಗಳಿಗೆ ಹೊಸದಾಡುತ್ತಿರುವುದನ್ನು.....

ಹಿಂದೆಯೇ ಕಪ್ಪು ಕತ್ತಲಿನ ಧಾರೆ ಎಲ್ಲಾ ಕಡೆ ನುಗ್ಗಿ ಹರಿದು ಎಲ್ಲವನ್ನು ನುಂಗಿ ಹಾಕುತ್ತಿರುವುದನ್ನು. ಎಂದೂ ಅರಿಯದ ದಿಗಿಲಿಂದ ಕಣ್ಣು ಕತ್ತಲಿಟ್ಟು ಬಂದಂತೆ ದೂರದಲ್ಲಿ ನೀನಾಳ ಗರ್ಭದಲ್ಲಿ ಆಗತಾನೇ ಜೀವತಳೆಯುತ್ತಿದ್ದ ಭ್ರೂಣವೊಂದನ್ನು ಒಂಬತ್ತು ತಿಂಗಳ ನಂತರ ಬೆಳಕು ಕಾಣುವ ಉತ್ಕಟ ಆಸೆಯಿಂದ ಅದು ಕುಡಿಯೊಡೆಯುತ್ತಿರುವುದನ್ನು....

ಅದನ್ನು ಕಾಣುತ್ತಾ ಕಾಣುತ್ತಾ ಕಣ್ಮುಚ್ಚಿ ಹಾಗೆ ಕತ್ತಲಿನ ಗೋಲದಲ್ಲಿ ಒಂದಾಗಿ ಹೋದಳು ಶಾಲಿಮಾ....

## ದೇವ ಪೂಜೆ ನುಡಿ ..ನಮನ

ದೇವನೊಬ್ಬ ನಾಮ ಹಲವು..

ಕಾಯಕವೇ ಕೈಲಾಸ..

ಗುರು ನುಡಿಗಳು..

ಪರಿಶುದ್ಧ ಹೃದಯದಿ ಪೂಜಿಸುವ ಕಾಯಾ,ವಾಚಾ,ಮನಸಾ..

ಭಕ್ತಿ ಮಾರ್ಗ,ಕರ್ಮ ಮಾರ್ಗ,ಜ್ಞಾನ ಮಾರ್ಗ..

ದಿ ..

ನಡೆಸುವ ಪ್ರತಿ ಪ್ರಾರ್ಥನೆ..

"ದೇವಪೂಜೆ.."

ದಿವ್ಯ ಜ್ಯೋತಿ..ಪ್ರೇಮ ಜ್ಯೋತಿ, ಜ್ಞಾನ ಜ್ಯೋತಿ..

ಬೆಳಗಿಸಿ..

ಮನಮಂದಿರದಲ್ಲಿ, ಅಖಂಡ ಜ್ಯೋತಿ..ಬೆಳಗುವ

ಹೃದಯದಲ್ಲಿ..ನಡೆವುದು "ದೇವಪೂಜೆ.."

## "ಅಮ್ಮ" ನೆಂಬ ಅವಿನಾಶಿ "ಅಕ್ಷರ"ದ ನೆನಪುಗಳು

ಶಿಶು, ಕಂದನವಸ್ಥೆ ದಾಟಿ ಬಾಲ್ಯಾವಸ್ಥೆ ಗೆ ಬಂದಾಗ

ಕೈ ಹಿಡಿದು ಬರೆಸಿದಳು ಅಕ್ಷರ"..ಅ" ಆ."....

"ಅಮ್ಮ"

ಸ್ಲೇಟು, ಬಳಪ..ದಲಿ..ಮೂಡಿತು..

ಸ್ಥಿರವಾದ,ಅವಿನಾಶಿ ಜ್ಞಾನ ಭಂಡಾರ..

ಧಾರೆಯೆರೆದಳು ಅಕ್ಷರ ...."ಅಮ್ಮ ",

ಮನೆಯೇ ಮೊದಲ ಪಾಠಶಾಲೆ ಜನನಿ ತಾನೆ ಮೊದಲ ಗುರುವು

ಆದಳು.".ಅಮ್ಮ ",

ಜೀವಿತ ಕಾಲದ ನೆನಪುಗಳ ವಿಸ್ಫುರಣ..

ಅಕ್ಷರಗಳಾದ ನೆನಪುಗಳ..ಜ್ಞಾನ ಕಿರಣ.

".ಅಮ್ಮ"

ಜೀವನದ ಪ್ರತಿ"ಅಕ್ಷರ"ಗಳ ಮೆರವಣಿಗೆಯಲ್ಲಿ..

"ಮಾರ್ಗ "ದರ್ಶನ "ದಲಿ

ನೆನಪಾಗುವಳು.."ಅಮ್ಮ"

ಸುಮನಾ

# ‘ಉಮಾರಾವ್ ಕತೆಗಳು’– ಒಂದು ಒಳನೋಟ

✍ ಡಾ. ಮಮತಾ ರಾವ್

ಕನ್ನಡ ಕಥಾಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಕಥನಶೈಲಿಗಾಗಿ ಪ್ರಸಿದ್ಧಿಯನ್ನು ಪಡೆದಂತಹ ಲೇಖಕಿಯರಲ್ಲಿ ಉಮಾರಾವ್ ಅವರು ಪ್ರಮುಖರು. ಉಳಿದ ಮಹಿಳಾಬರಹಗಾರರಿಗಿಂತ ಭಿನ್ನ, ಅನನ್ಯ ಹಾಗೂ ವೈವಿಧ್ಯಪೂರ್ಣವಾದ ಬರಹಗಳನ್ನು ಬರೆಯುತ್ತಿರುವ ಲೇಖಕಿಯಂದೇ ಗುರುತಿಸಿಕೊಳ್ಳುತ್ತಾರೆ. ಕಳೆದ ನಾಲ್ಕುದಶಕಗಳಿಂದಲೂ ಸತತವಾಗಿ ಕಥೆಗಳಲ್ಲಿ ವಸ್ತು, ಶೈಲಿ, ತಂತ್ರ ಹಾಗೂ ನಿರೂಪಣೆಯಲ್ಲಿ ಇವರು ಸಾಧಿಸುತ್ತಿರುವ ನೂತನ ಪ್ರಯೋಗಗಳ ಮೂಲಕ ಓದುಗರ ಹಾಗೂ ವಿಮರ್ಶಕರ ಗಮನ ಸೆಳೆಯುತ್ತಾ ಬಂದಂತಹ ಏಕೈಕ ಕಥೆಗಾರರೆನ್ನಲಡ್ಡಿಯಿಲ್ಲ. ಸಣ್ಣ ಕತೆಗಳು ಮೊದಲ ಆದ್ಯತೆಯನ್ನು ಪಡೆದರೂ, ಕವನ, ನಾಟಕ, ಕಾದಂಬರಿ, ಅಂಕಣಬರಹ, ಜೀವನಚಿತ್ರ, ಅನುವಾದ ಹೀಗೆ ವಿಭಿನ್ನ ಸಾಹಿತ್ಯ ಪ್ರಕಾರಗಳಲ್ಲಿ ಸುಮಾರು ಹದಿನಾಲ್ಕು ಕೃತಿಗಳನ್ನು ರಚಿಸಿ ಹಲವು ಪ್ರಶಸ್ತಿ ಪುರಸ್ಕಾರಗಳನ್ನು ಪಡೆದವರು. ಜಾಹೀರಾತು ಮಾಧ್ಯಮದಲ್ಲಿ ವಿವಿಧ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿದ ಅನುಭವ ಇವರಲ್ಲಿದ್ದು ರಂಗಭೂಮಿ, ಆಕಾಶವಾಣಿ ಹೀಗೆ ಹಲವು ಕ್ಷೇತ್ರಗಳಲ್ಲಿ ಕೈಯಾಡಿಸುತ್ತಿದ್ದರೂ ಉಮಾರಾವ್ ಅವರು ಕಥೆಗಾರರಾಗಿಯೇ ಹೆಚ್ಚು ಗಮನಸೆಳೆಯುತ್ತಾರೆ. ನಾಡಿನ ಬಹುತೇಕ ಪತ್ರಿಕೆಗಳಲ್ಲಿ, ಅಂತರ್ಜಾಲ ವಲಯದಲ್ಲಿ ಪ್ರಕಟಗೊಂಡು ವ್ಯಾಪಕ ಓದುಗವರ್ಗವನ್ನು ಗಳಿಸಿರುವ ಇವರ ಹಲವು ಮಹತ್ವದ ಕಥೆಗಳು ತಮಿಳು, ಹಿಂದಿ, ಪಂಜಾಬಿ ಭಾಷೆಗಳಿಗೆ ಅನುವಾದಗೊಂಡು ಓದುಗರ ಮೆಚ್ಚುಗೆ ಪಡೆದಿವೆ ಎನ್ನುವುದು ಗಮನೀಯ. ಇದೀಗ ರೂಪ ಪ್ರಕಾಶನ, ಮೈಸೂರು (2019) ಪ್ರಕಟಿಸಿರುವ ಅವರ ಸಮಗ್ರ ಕಥಾಸಂಕಲದ ಕುರಿತಾದ ಪರಿಚಯಾತ್ಮಕ ಲೇಖನವಿದು.

ವಿಜ್ಞಾನ ಹಾಗೂ ಕಾನೂನಿನ ವಿದ್ಯಾರ್ಥಿಯಾಗಿದ್ದ ಉಮಾರಾವ್ ಅವರಿಗೆ ಬಾಲ್ಯದಿಂದಲೆ ಹೆತ್ತವರಿಂದಾಗಿ ಸಾಹಿತ್ಯದ ಓದಿನ ರುಚಿ ವರವಾಗಿ ಲಭಿಸಿತ್ತು. ಮದುವೆಯಾಗಿ 30 ವರ್ಷ ಮುಂಬಯಿಯಲ್ಲೇ ಸಂಸಾರ ಹೂಡಬೇಕಾಗಿ ಬಂದಾಗ ಅವರ ಮುಂದೆ ಆಧುನಿಕ ಜಗತ್ತಿನ ಅನುಭವಲೋಕವೊಂದು ಅನಾವರಣಗೊಂಡಿತು. ಬಹುಭಾಷಿಕ ಬಹುಸಂಸ್ಕೃತಿಯ ಮಹಾನಗರದ ಬಹುಸ್ಥರದ ಬದುಕಿನ ಅನುಭವಗಳನ್ನು ಅವಲೋಕಿಸುತ್ತಾ ಬೆರಗುಗೊಂಡು ಮೈಮರೆತಿದ್ದ ಉಮಾರಾವ್ ಅವರೊಳಗಿನ ಕನ್ನಡತನವನ್ನು ಜಾಗೃತವಾಗಿರಿಸಿದ್ದು ಇಲ್ಲಿಯ ಕನ್ನಡ ಚಟುವಟಿಕೆಗಳು; ಮುಖ್ಯವಾಗಿ ನಾಟಕರಂಗ ಹಾಗೂ ಆಕಾಶವಾಣಿಯಲ್ಲಿ ಸಕ್ರೀಯವಾಗಿ ಭಾಗವಹಿಸುವಿಕೆ ಇವರೊಳಗಿನ ಸೃಜನಶೀಲತೆಗೆ ಹೊಸ ಆಯಾಮ ನೀಡಿತು. ಮುಂಬಯಿಯ ಸಾಹಿತ್ಯಲೋಕದ ಪರಿಚಯವಾಗಿ ಅದಾಗಲೇ ಪ್ರಸಿದ್ಧಿಯನ್ನು ಪಡೆದಂತಹ ಸಾಹಿತಿಗಳಾದ ಯಶವಂತ ಚಿತ್ತಾಲ, ಜಯಂತ ಕಾಯ್ಕಿಣಿಯವರ ಪ್ರತಿಕ್ರಿಯೆ, ಪ್ರೋತ್ಸಾಹ ಅವರ ಬರವಣಿಗೆಗೆ ಪ್ರೇರಣೆ ನೀಡಿತು. ಅದರ ಪರಿಣಾಮವೇ, ‘ಮೊದಲ ಕತೆ ಸಿಂಧು 1978ರಲ್ಲಿ; ಸಿಂಧಿ ಕಡಿ 2018ರಲ್ಲಿ ಹುಟ್ಟಿದ್ದು ಮುಂಬಯಿಯಲ್ಲಿ.’ ಎನ್ನುತ್ತಾರೆ ಉಮಾರಾವ್.

ಮುಂಬಯಿಯಲ್ಲಿದ್ದಾಗ ಸುಮಾರು ಹದಿನೈದು ವರ್ಷ ಜಾಹೀರಾತು ಉದ್ಯಮದಲ್ಲಿ ಫ್ರೀಲಾನ್ಸ್ ಅಡ್ವರ್ಟೈಸಿಂಗ್ ಕ್ಷೇತ್ರದಲ್ಲಿ ಕಾಪಿರೈಟರ್ ಆಗಿ ಜಾಹೀರಾತು ಫಿಲ್ಮಗಳಿಗಾಗಿ ಸ್ಕ್ರಿಪ್ಟ್‌ಗಳನ್ನು ಬರೆಯುವ ಅವಕಾಶ; ಸೊಫಿಯಾ ಕಾಲೇಜಿನಲ್ಲಿ ಭಾಗವಹಿಸಿದ ಓಪನ್ ಕ್ಲಾಸ್‌ರೂಮಿನ ಅನುಭವ; ಕೆನಡಾದ ಬ್ರಿಟಿಷ್ ಕೊಲಂಬಿಯಾ ವಿಶ್ವವಿದ್ಯಾಲಯದಿಂದ ಅಂತರಾಷ್ಟ್ರೀಯ ಫೆಲೋಶಿಪ್ ಪಡೆದು ಕ್ರಿಯೆಟಿವ್ ರೈಟಿಂಗ್ ವಿಭಾಗದಲ್ಲಿ ಮೂರು ತಿಂಗಳಲ್ಲಿ ವಿವಿಧ ಸಾಂಸ್ಕೃತಿಕ ಹಿನ್ನೆಲೆಯ ಬರಹಗಾರರ ಒಡನಾಟ; ಒಬ್ಬಳೇ ದೇಶ–ವಿದೇಶಗಳನ್ನು ಸುತ್ತುತ್ತಾ ಗಳಿಸಿದ ಅನುಭವಗಳು ಎಲ್ಲವೂ ಅವರನ್ನು ಓರ್ವ ನುರಿತ ಬರಹಗಾರ್ತಿಯನ್ನಾಗಿ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವು. ಒಟ್ಟಿನಲ್ಲಿ ಮೂರು ದಶಕಗಳ ಕಾಲ ಮುಂಬಯಿ ವಾಸ, ದೇಶ–ವಿದೇಶಗಳ ಪ್ರವಾಸದ ಅನುಭವಗಳ ಸಾರ, ಹೊಸ ಜಾಗ, ಹೊಸ ಮುಖ, ಹೊಸ ಅನುಭವಗಳ ಅಭೀಪ್ಸೆ ಅವರಿಗೆ ತಮ್ಮ ಕಥೆಗಳ ವಸ್ತು, ಭಾಷೆ, ನಿರೂಪಣೆ ಎಲ್ಲದರಲ್ಲೂ ಹೊಸತನವನ್ನು ಕಾಣಿಸಲು ಸಾಧ್ಯವಾಗಿಸಿತು. ಆ ಕಾರಣದಿಂದಾಗಿ ಹೊಸಹೊಸ ಪ್ರಯೋಗವನ್ನು ಮಾಡುತ್ತಾ ಓದುಗರನ್ನು ಅಚ್ಚರಿಗೊಳಿಸುತ್ತಾ ಅವರೊಂದಿಗೆ ತಾವೂ ಅಚ್ಚರಿ ಪಡುತ್ತಾ, ಕಥೆಯ ಅರ್ಥಸಾಧ್ಯತೆಗಳ ಕುರಿತು ಓದುಗರನ್ನು ಕಾಡಿಸುತ್ತಾ ತಮ್ಮೊಳಗನ್ನೂ ಚಡಪಡಿಸುತ್ತಾ ಬಂದವರು. ಅದರಲ್ಲೂ ಜಾಹೀರಾತು ಕ್ಷೇತ್ರದಲ್ಲಿ ಅತೀ ಕಡಿಮೆ ಪದಪ್ರಯೋಗ ಮಾಡಿ ಅತ್ಯಂತ ಚುಟುಕಾಗಿ ಅಷ್ಟೇ ಪರಿಣಾಮಕಾರಿಯಾಗಿ ಬರೆಯುವ ಕೌಶಲವನ್ನು ಕರಗತಗೊಳಿಸಿದ್ದೇ ಅವರ ಅತೀ ಸಣ್ಣಕಥೆಗಳು ಬಹಳ ಪ್ರಯೋಗಾತ್ಮಕವಾಗಿ ಮೂಡಿಬಂದಿವೆ. ಅವರ ಪ್ರಾರಂಭದ ಸಂಕಲನದ ಕಥೆಗಳೊಂದಿಗೆ ಇತ್ತೀಚಿನ ಕಥೆಗಳನ್ನು ಹೋಲಿಸಿದಾಗ ಇದು ಸ್ಪಷ್ಟವಾಗುತ್ತದೆ.

ತುಮುಕೂರಿನಲ್ಲಿ ಹುಟ್ಟಿಬೆಳೆದ ಉಮಾ ಅವರಿಗೆ ಮುಂಬಯಿ ನಗರದ ಬಹು ಭಾಷಿಕ, ಬಹು ಸಾಂಸ್ಕೃತಿಕ ಪರಿಸರದ ಜಗತ್ತಿನ ಪರಿಚಯವು ಅವರ ಅನುಭವಲೋಕವನ್ನು ವಿಸ್ತರಿಸಿ ಸುತ್ತಮುತ್ತಲಿನ ಬದುಕನ್ನು ಗ್ರಹಿಸುವ ಶಕ್ತಿಯನ್ನು ಹರಿತಗೊಳಿಸಿತು. ಮುಂಬಯಿ ಬದುಕಿನಲ್ಲಿ ತಮ್ಮನ್ನು ತಾವು ಒಂದಾಗಿಸುತ್ತಾ ತಮ್ಮ ವ್ಯಕ್ತಿತ್ವದ ಬಹುಮುಖಿ ಬೆಳವಣಿಗೆಯೊಂದಿಗೆ ತಾವು ಗ್ರಹಿಸಿದ ವೈವಿಧ್ಯಪೂರ್ಣ ಆಧುನಿಕ ಅನುಭವಲೋಕವನ್ನು ತಮ್ಮ ಬರವಣಿಗೆಯಲ್ಲಿ ಅಭಿವ್ಯಕ್ತಿಸುತ್ತಾ ಬಂದರು. ಸ್ತ್ರೀಯರನ್ನು ಕೇಂದ್ರವಾಗಿಟ್ಟುಕೊಂಡು ಬರೆದ

ಕಥೆಗಳನೇಕವಿದ್ದರೂ ಅಲ್ಲಿ ಸ್ತ್ರೀವಾದಿತನವನ್ನು ಪ್ರತಿಪಾದಿಸುವ ಛಲವಿಲ್ಲ; ಏಕತಾನತೆಯಿಂದ ನೀರಸವಾಗುತ್ತಿರುವ ಬದುಕನ್ನು ಭಿನ್ನರೀತಿಯಲ್ಲಿ ಗ್ರಹಿಸುವತ್ತ ಅನುಭವಿಸತ್ತ ಓದುಗರ ಚಿತ್ತವನ್ನು ಸೆಳೆಯುತ್ತಾ ತಮ್ಮ ಅನುಭವವು ಕೇವಲ ಸ್ತ್ರೀಸಂವೇದನೆಯ ಚೌಕಟ್ಟಿಗೆ ಮಾತ್ರ ಸೀಮಿತವಾಗಿರದೆ ಅದು ಸಾರ್ವತ್ರಿಕವಾಗುವತ್ತ ಕಾಳಜಿ ವಹಿಸಿದ ಅಪರೂಪದ ಲೇಖಕಿ ಇವರು. ಎಂಬತ್ತರ ದಶಕದಲ್ಲಿ ನಾಡಿನ ಲೇಖಕಿಯರೆಲ್ಲಾ ಪರಂಪರೆಯ ಹೊದಿಕೆಯಲ್ಲಿದ್ದುಕೊಂಡೇ ತಮ್ಮ ಸ್ಥಿತಿಗತಿ, ತಮ್ಮ ಶೋಷಣೆಯ ಕುರಿತಾದ ಕಥನಗಳ ಸುಳಿಯೊಳಗೇ ವ್ಯಸ್ತರಾಗಿದ್ದಾಗ, ಒಳನಾಡಿನ ಲೇಖಕಿಯರಿಗೆ ದಕ್ಕದ ಅವರಿಗೆ ಅನೂಹ್ಯವಾದ ಅನುಭವಲೋಕವನ್ನು ಅವಲೋಕಿಸುವ ಅವಕಾಶ ಇವರಿಗೆ ಲಭಿಸಿತು. ಇಂದಿಗೂ ಮಹಿಳಾ ಲೇಖಕಿಯರಿಗೆ ಕೈಗೆಟುಕದ 'ನಗರ ಪ್ರಜ್ಞೆ'ಗೇ ಆದ್ಯತೆ ನೀಡುವ ಉಮಾರಾವ್ ಅವರು ಆಧುನಿಕ ವಿಚಾರಧಾರೆಯನ್ನು ಕಥೆಗಳ ಮೂಲಕ ಕನ್ನಡಕ್ಕೆ ಪರಿಚಯಿಸಿದ ವಿಶಿಷ್ಟ ಬರಹಗಾರರೆಂದು ಗುರುತಿಸಿಕೊಳ್ಳುತ್ತಾರೆ. ಮುಂಬಯಿ ಬದುಕನ್ನು ತಮ್ಮ ಕಥೆಗಳಲ್ಲಿ ಜಗತ್ತಿಗೇ ಪರಿಚಯಿಸಿದ ಜಯಂತ ಕಾಯ್ಕಿಣಿಯವರಿಗಿಂತ ಭಿನ್ನವಾದ ಒಳನೋಟಗಳನ್ನು ಸ್ತ್ರೀದೃಷ್ಟಿಕೋನದಿಂದ ಬರೆಯುತ್ತಾರೆ. ನಗರಜೀವನವನ್ನು ಪುಟ್ಟಪುಟ್ಟ ವಾಕ್ಯಗಳಲ್ಲಿ ಕಟ್ಟಿಕೊಡುವ ಅವರ ಸಾಮರ್ಥ್ಯ ಅವರ ವೈಶಿಷ್ಟ್ಯತೆಯೂ ಹೌದು.

ತಮ್ಮ ಪ್ರಥಮ ಕಥಾಸಂಕಲನ 'ಅಗಸ್ತ್ಯ'(1986)ದಿಂದಲೇ ವಿಮರ್ಶಕರ ಗಮನ ಸೆಳೆದವರು. ಪ್ರಸ್ತುತ ಸಂಕಲನದ ಕಥೆ– 'ಅಗಸ್ತ್ಯ'– ಮೂರು ದಶಕಗಳ ಹಿಂದೆಯೇ ವೈಜ್ಞಾನಿಕ ಅವಿಷ್ಕಾರವನ್ನು ಕೇಂದ್ರದಲ್ಲಿಟ್ಟು ಮಾನವನ ವಿಕೃತ ಬುದ್ಧಿಯ ದುಷ್ಪರಿಣಾಮಗಳನ್ನು ವಿಶ್ಲೇಷಿಸುವ ಅದ್ಭುತವಾದ ಮನೋವೈಜ್ಞಾನಿಕ ಕಥೆ. ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದಿಂದ ಜನೆಟಿಕ್ ಇಂಜನಿಯರಿಂಗನಲ್ಲಿ ಡಾಕ್ಟರೇಟ್ ಗಳಿಸಿ, ಬದುಕಿನಲ್ಲಿ ಎಲ್ಲವನ್ನೂ ಪಡೆದು ಪರಿಪೂರ್ಣನೆನಿಸಿಕೊಂಡ ಅಗಸ್ತ್ಯನಿಗೆ ಅಮರತ್ವದ ಹಂಬಲ. ತಾಯಿಯ ಅಂಶವಿಲ್ಲದೇ ಕೇವಲ ತನ್ನ ಜೈವಿಕಾಂಶಗಳಿಂದ ಮಾತ್ರ ಕೂಡಿದ ತನ್ನ ಪ್ರತಿರೂಪವಿರುವ ಮಗನಿಗೆ ಜನ್ಮನೀಡಲಿಕ್ಕಾಗಿ ಸಾಧನವನ್ನಾಗಿಸಿದ ಪ್ರೀತಿಯ ಪತ್ನಿ ಮಿಮಿ ಮರಣಿಸಿದಾಗಲೂ ಅಗಸ್ತ್ಯ ದುಃಖಿಸಲಿಲ್ಲ. ಯಾಕೆಂದರೆ ತನ್ನಂತೆಯೇ, ತಾನೇ ಆಗಿ ಬೆಳೆಯತೊಡಗಿದ ಮಗ ವರುಣನನ್ನು ನೋಡಿ ಆತ ಅವರ್ಣನೀಯ ಆನಂದ ಹಾಗೂ ವಿಚಿತ್ರ ತೃಪ್ತಿಯನ್ನು ಅನುಭವಿಸಲಾರಂಭಿಸಿದ್ದ. ಆದರೆ ತನ್ನ ಎಲ್ಲಾ ಜೀನ್‌ಗಳನ್ನೂ ಇನ್‌ಹೆರಿಟ್ ಮಾಡಿರುವ ಮಗ ವರುಣ, ತನ್ನ ನೆನಪುಗಳನ್ನು ತನ್ನ ದೌರ್ಬಲ್ಯಗಳನ್ನು ಸಹ ಇನ್‌ಹೆರಿಟ್ ಮಾಡಿದ್ದಾನೇನೋ ಎನ್ನುವ ಆತಂಕ ಅಗಸ್ತ್ಯನನ್ನು ಕಾಡಲಾರಂಭಿಸಿದಾಗ ಆತ ಆತಂಕಕ್ಕೊಳಗಾಗುತ್ತಾನೆ. ತನ್ನಲ್ಲಿಲ್ಲದ ತಾರುಣ್ಯದ ಬಲದಿಂದ ತಾನು ಪ್ರೀತಿಸಿದ ಹುಡುಗಿ ಶಮಿಯನ್ನೇ ಮಗ ವರುಣ ಪ್ರೀತಿಸತೊಡಗಿದಾಗ ತಮ್ಮಿಬ್ಬರ ಏಕರೂಪತೆ ನೀಡುತ್ತಿದ್ದ ಆನಂದ ಹಾಗೂ ತೃಪ್ತಿ ಕ್ರಮೇಣ ಕರಗತೊಡಗುತ್ತದೆ. ತನ್ನೊಡನೇ ತಾನೇ ಸ್ಪರ್ಧಿಸುತ್ತಿರುವ ಭಾಸವಾಗಿ, ತಾನು ಕೇವಲ ವರುಣನ ಭೂತಕಾಲದ ನೆನಪುಗಳು ಮಾತ್ರವಾಗಿ ಮಾರ್ಪಾಡಾಗುತ್ತಿದ್ದೇನೆಯೇ ಎನ್ನುವ ಭಯ ಅವನನ್ನು ಹತಾಶನನ್ನಾಗಿಸುತ್ತದೆ. 'ತನ್ನ ಮಗನನ್ನು "ಮಗ" ಎಂದು ಕರೆಯಬಹುದೇ ಎನ್ನುವ ಪ್ರಶ್ನೆಗೆ 21 ವರ್ಷಗಳ ನಂತರವೂ ಅವನಿಗೆ ಉತ್ತರ ಸಿಕ್ಕಿಲ್ಲ.' ತಾನು ಕೈಗೊಂಡ ಪ್ರಯೋಗದ ಪರಿಣಾಮವನ್ನು ಎದುರಿಸಲಾಗದೆ ಆತ್ಮಹತ್ಯೆಗೆ ಶರಣಾಗುತ್ತಾನೆ. ಆಸಾಮಿನ ಟೀ ಪ್ಲಾಂಟೇಶನ್ನಿನ ಮನೋಹರ ಪರಿಸರದಲ್ಲಿ ಅನಾವರಣಗೊಳ್ಳುವ ಮನೋವೈಜ್ಞಾನಿಕ ಕಥೆಯು ಕೊನೆಯವರೆಗೂ ಕುತೂಹಲವನ್ನು ಉಳಿಸಿಕೊಳ್ಳುವ ಕೌಶಲ್ಯದಿಂದ ನಿರೂಪಣಾ ಶೈಲಿಯಿಂದಾಗಿ ಕನ್ನಡಕ್ಕೇ ವಿಶಿಷ್ಟವಾದ ಕಥೆಯೆಂದು ಗುರುತಿಸಿಕೊಳ್ಳುತ್ತದೆ.

ಪ್ರಸ್ತುತ ಸಂಕಲನದ 'ಶೂ ಪಾಲಿಷ್ ಹುಡುಗ', 'ಸಿಂಧು', 'ಅಪರಾಧಿ' ಕಥೆಗಳ ಮೂಲಕ ಉಮಾ ರಾವ್ ಅವರು ಮುಂಬಯಿಯ ನಿರ್ಗತಿಕ ಮಕ್ಕಳ ಶೋಚನೀಯ ಬದುಕನ್ನು, ಪರಿಸ್ಥಿತಿಯ ಕೈಗೊಂಬೆಯಾಗಿ ಬಾಲಾಪರಾಧಿಗಳಾದವರು ಆ ಕಳಂಕವನ್ನು ತೊಡೆದುಕೊಳ್ಳಲಾಗದ ಅಸಹಾಯಕತೆಯನ್ನು ಅತ್ಯಂತ ನಿರ್ಲಿಪ್ತತೆಯಿಂದ ದಾಖಲಿಸುತ್ತಾರೆ. 'ಕಾಲ' ಕಥೆಯಲ್ಲಿ ತನ್ನ ಆಯುಷ್ಯದ ಬಹುಕಾಲ ಅರಮನೆಯೊಂದರ ಕಾವಲುಗಾರನಾಗಿಯೇ ಕೆಲಸ ಮಾಡಿದ ರಾಜಪ್ಪ ಇಳಿವಯಸ್ಸಿನಲ್ಲಿ ಕೆಲಸವನ್ನು ಕಳೆದುಕೊಳ್ಳುತ್ತಾನೆ. ಹೊಟ್ಟೆಪಾಡಿಗಾಗಿ ಬೇರೆ ಕೆಲಸ ಹಿಡಿದರೂ ಅದನ್ನು ಮಾಡಲಾಗದೆ ಒದ್ದಾಡುವ ಚಿತ್ರಣವು ಇಂದು ಜಾಗತೀಕರಣದ ಫಲವಾಗಿ ತಮ್ಮ ನೌಕರಿಗಳನ್ನು ಕಳೆದುಕೊಂಡು ಹೊಸ ಪರಿಸರದಲ್ಲಿ ಹೊಸ ನೌಕರಿಗಳಲ್ಲಿ ಹೊಂದಾಣಿಕೆಯನ್ನು ಮಾಡಿಕೊಳ್ಳದೆ ತೊಳಲಾಡುತ್ತಾ ಮಾನಸಿಕ ಕ್ಷೋಭೆಯನ್ನು ಅನುಭವಿಸುತ್ತಿರುವ ಸಾವಿರಾರು ಜನರನ್ನು ಪ್ರತಿನಿಧಿಸುತ್ತದೆ. ಮನುಷ್ಯರ ಹಾಗೂ ಅವರ ಸಾರ್ವಕಾಲಿಕ ಸಮಸ್ಯೆಗಳ ಕುರಿತು ಕಾಳಜಿ, ಕಳಕಳಿ ಉಮಾರಾವ್ ಅವರ ಕಥೆಗಳ ಜೀವಾಳ. ರಸ್ತೆಬದಿ ಶೂ ಪಾಲಿಷ್ ಮಾಡುವ ಬಾಲಕ ಮುಂಬಯಿಯ ಪ್ರತಿಷ್ಠಿತವಲಯ ಕುಲಾಬದಲ್ಲಿ ದೊಡ್ಡ ಶೂ ಅಂಗಡಿ ತೆರೆಯಬೇಕು ಕೆಂಪುಬಣ್ಣದ ಕಾರು ತೆಗೆದುಕೊಳ್ಳಬೇಕೆನ್ನುವ ಕನಸುಕಾಣುವುದರಿಂದ ಹಿಡಿದು ತನ್ನನ್ನೇ ಹೋಲುವ ಮಗನನ್ನು ವೈಜ್ಞಾನಿಕವಾಗಿ ಪಡೆದು ಅದರ ಪರಿಣಾಮಗಳನ್ನು ಎದುರಿಸಲಾಗದೆ ಹತಾಶನಾಗುವ ಜೈವಿಕ ವಿಜ್ಞಾನಿಯ ತನಕ ವೈವಿಧ್ಯಮಯವಾದ ಪಾತ್ರಗಳನ್ನೊಳಗೊಂಡ ಕಥೆಗಳನ್ನು ಬರೆದು ತಮ್ಮ ಚೊಚ್ಚಲ ಸಂಕಲನದಿಂದಲೇ ಯಶಸ್ಸನ್ನು ಸಾಧಿಸಿದ ಉಮಾರಾವ್ ತಮ್ಮ ಮುಂದಿನ ಕಥೆಗಳಲ್ಲಿ ಹೊಸತನದ ಶೋಧನೆಯನ್ನು ನಡೆಸಿರುವುದನ್ನು ಕಾಣಬಹುದು.

**ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು**

## ಸುಧಾ ಮೂರ್ತಿ ಅವರ ಸಾಹಿತ್ಯ ಸಾಧನೆ - ಒಂದು ಅವಲೋಕನ

## ಕನ್ನಡಿಗರು ಬಹುದೊಡ್ಡ ಸಂಸ್ಕೃತಿಯ ನಿರ್ಮಾಪಕರು : ಪದ್ಮಭೂಷಣ ಡಾ.ಸುಧಾಮೂರ್ತಿ

ಕನ್ನಡ ನಾಡಿನ ಬಗ್ಗೆ ತಿಳಿದುಕೊಳ್ಳಬೇಕಾದರೆ ಅದರ ಆಳವಾದ ಇತಿಹಾಸವನ್ನು ತಿಳಿದುಕೊಳ್ಳಬೇಕಾಗುವುದು. ನಮ್ಮ ಭಾಷೆ ಎಷ್ಟು ಹಳೆಯದು, ನಮ್ಮ ಹಿರಿಯರು ತಮ್ಮ ಭಾಷೆ, ನಾಡು, ಜನರ ಬಗ್ಗೆ ಯಾವ ಅಭಿಪ್ರಾಯವನ್ನು ಹೊಂದಿದ್ದರು ಎಂಬುದನ್ನು ತಿಳಿದುಕೊಳ್ಳಲು ಶಾಸನಗಳ ಅಧ್ಯಯನ ನಡೆಸುವುದು ಅಗತ್ಯ. ಕನ್ನಡ ಶಾಸನದ ಡಿಪ್ಲೊಮಾ ಕೋರ್ಸ್ ಮಾಡಿದ ನಂತರ ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ಸುತ್ತಾಡಿ ಶಾಸನಗಳನ್ನು ಓದಿದುದರಿಂದ ತನ್ನ ದೃಷ್ಟಿಕೋನವು ಬದಲಾಗಿದೆ. ಕನ್ನಡ ಭಾಷೆಯ ಆಳ, ಅರಿವು, ಹರವು ತಿಳಿದು ಅಭಿಮಾನವೆನಿಸುತ್ತಿದೆ.

ಒಂದು ಭಾಷೆಗೂ, ಸಂಸ್ಕೃತಿಗೂ ನಂಟುತನ ಇರುತ್ತದೆ. ಭಾಷೆ ನಮ್ಮ ಸಂಸ್ಕೃತಿ ಮತ್ತು ನಡವಳಿಕೆಯನ್ನು ತೋರಿಸುತ್ತದೆ. ಕನ್ನಡಿಗರು ಬಹು ದೊಡ್ಡ ಸಂಸ್ಕೃತಿಯ ನಿರ್ಮಾಪಕರು ಎಂದು ಹಿರಿಯ ಸಾಹಿತಿ, ಪದ್ಮಭೂಷಣ ಡಾ. ಸುಧಾಮೂರ್ತಿ ಅವರು ಅಭಿಪ್ರಾಯ ಪಟ್ಟರು. ಅವರು ಎಪ್ರಿಲ್ 23ರಂದು ವಿಶ್ವ ಪುಸ್ತಕ ದಿನದ ವಿಶೇಷ ಕಾರ್ಯಕ್ರಮದ ಅಂಗವಾಗಿ ಮುಂಬೈ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ ಹಾಗೂ ಐ ಲೇಸಾ: ದ ವಾಯ್ಸ್ ಆಫ್ ಓಷನ್(ರಿ) ಜಂಟಿಯಾಗಿ ಆಯೋಜಿಸಿದ್ದ "ಸುಧಾಮೂರ್ತಿ ಅವರ ಸಾಹಿತ್ಯಸಾಧನೆ: ಒಂದು ಅವಲೋಕನ " ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡುತ್ತಿದ್ದರು. ಈ ಕಾರ್ಯಕ್ರಮವನ್ನು ಝೂಮ್ ಅಂತರ್ಜಾಲ ವೇದಿಕೆಯಲ್ಲಿ ಆಯೋಜಿಸಲಾಗಿತ್ತು.

ಸುಧಾಮೂರ್ತಿ ಅವರು ತಮ್ಮ ಸಾಹಿತ್ಯ ಪಯಣದ ಅನೇಕ ಅನುಭವಗಳನ್ನು ಹಂಚಿಕೊಂಡರು. ಮುಂಬೈಯ ಬಗ್ಗೆ, ಮುಂಬೈಯಲ್ಲಿ ನೆಲೆಸಿರುವ ಕನ್ನಡಿಗರ ಸಾಧನೆ, ಸಾಹಸಗಳ ಬಗ್ಗೆ ಅಭಿಮಾನವನ್ನು ವ್ಯಕ್ತಪಡಿಸುವುದರ ಜೊತೆಗೆ ಕನ್ನಡ ಸಾಹಿತ್ಯ ಸೇವಾ ಕೈಂಕರ್ಯದಲ್ಲಿ ಸದಾ ತೊಡಗಿಸಿಕೊಂಡಿರುವ ಕನ್ನಡ ವಿಭಾಗಕ್ಕೆ ಎಲ್ಲಾ ರೀತಿಯ ಸಹಕಾರವನ್ನೀಯುವುದಾಗಿ ಅವರು ಈ ಸಂದರ್ಭದಲ್ಲಿ ಭರವಸೆಯನ್ನಿತ್ತರು. ಅವರ ಪುಸ್ತಕಗಳ ಕುರಿತ ಅವಲೋಕನ ನಡೆಸಿದ ವಿದ್ಯಾರ್ಥಿಗಳ ಕೃತಿ ಸಮೀಕ್ಷೆಗೆ ಸ್ಪಂದಿಸಿ ಹರ್ಷ ವ್ಯಕ್ತಪಡಿಸಿದರು. ಕಾರ್ಯಕ್ರಮದ ಸಮಾಪನದಲ್ಲಿ ಮಾತನಾಡಿದ ಅವರು, ನಾಲ್ಕು ಜನರ ಜೊತೆಗೆ ಮಾತನಾಡುತ್ತಾ , ಬೆರೆಯುತ್ತಾ ಸಂತೋಷದಿಂದ ಇರುವುದೇ ನಿಜವಾದ ಜೀವನ. ನಾವು ನಮ್ಮ ನಮ್ಮ ಸಮಸ್ಯೆಗಳನ್ನು ಎದುರಿಸಿ, ಅವುಗಳನ್ನು ಜಯಿಸಲು ಪ್ರಯತ್ನ ಪಡಬೇಕು. ಹಾಗಾದಾಗಲೇ ಸಂತೋಷದಿಂದ ಇರಲು ಸಾಧ್ಯ. ಹಣ, ಸೌಂದರ್ಯ, ಪ್ರಸಿದ್ಧಿ ಇವುಗಳು ಸಂತೋಷವನ್ನು ಕೊಡಲಾರವು ಎಂದು ಹಿತನುಡಿಗಳನ್ನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮುಂಬೈ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರು ಆದ ಪ್ರೊ .ಜಿ .ಎನ್. ಉಪಾಧ್ಯ ಅವರು ತಮ್ಮ ಪ್ರಾಸ್ತಾವಿಕ ನುಡಿಗಳಲ್ಲಿ, ಹೊಸಗನ್ನಡ ಸಾಹಿತ್ಯ ಚರಿತ್ರೆಯ 21 ನೆಯ ಶತಮಾನದ ಕಳೆದ ಇಪ್ಪತ್ತೂರು ವರ್ಷಗಳಲ್ಲಿ ನಡೆದ ವಿದ್ಯಮಾನಗಳನ್ನು ದಾಖಲಿಸುವ, ಸಾಹಿತ್ಯ ಚರಿತ್ರೆಯನ್ನು ಕಟ್ಟುವ ಒಂದು ಅಂಗವಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಮಕಾಲೀನ, ಸಾಂಪ್ರತ, ವರ್ತಮಾನದ ಸಾಹಿತ್ಯವನ್ನು, ಅದರ ಮೌಲ್ಯಮಾಪನವನ್ನು ಮಾಡುವ ಕೆಲಸ ಆಗಬೇಕಾಗಿದೆ ಎಂದು ಕಾರ್ಯಕ್ರಮದ ಉದ್ದೇಶವನ್ನು ಸ್ಪಷ್ಟಪಡಿಸಿದರು. ಅವರು ಅತಿಥಿಯನ್ನು ಸ್ವಾಗತಿಸುತ್ತಾ, ಸುಧಾಮೂರ್ತಿ ಅವರು ಬದುಕಿಗೆ ಬದ್ಧರಾದಂತಹ ಲೇಖಕರು. ತಮ್ಮ ಮಾತು- ಕೃತಿಗಳ ಮುಖಾಂತರ ಕನ್ನಡ ಭಾಷೆ , ಸಂಸ್ಕೃತಿಯ ಬಣ್ಣ ಬನಿಯನ್ನು ಗಾಢಗೊಳಿಸಿದಂತಹ ಹಿರಿಯ ಸಾಹಿತಿ. ಅವರು ಬರವಣಿಗೆಯು ಒಂದು ಜವಾಬ್ದಾರಿಯ ಕೆಲಸ ಎಂದು ನಂಬಿಕೊಂಡು ಬಂದಂತಹವರು. ಓದುಗರಿಗೆ ಪ್ರಖರವಾದ ವೈಚಾರಿಕತೆಯನ್ನು ಕೊಟ್ಟವರು.ಅವರ ಬರಹಗಳು ಚಿಂತನೆಗೆ ಹಚ್ಚುವಂತಹದ್ದಾಗಿವೆ. ನಮ್ಮ ಸುತ್ತಮುತ್ತಲಿನ ಬದುಕನ್ನು ಅನಾಯಾಸವಾಗಿ, ಒಂದು ಸಾಂಸ್ಕೃತಿಕ ಕಥನವಾಗಿ ಸರಳವಾಗಿ ಕಟ್ಟಿಕೊಡುವುದು ಅವರ ಬರಹಗಳ ವಿಶಿಷ್ಟತೆ. ಸ್ತ್ರೀ ಸಬಲೀಕರಣದ ಪಥದಲ್ಲಿ ಒಂದು ದೊಡ್ಡ ಮೈಲುಗಲ್ಲನ್ನು ನೆಟ್ಟವರು ಸುಧಾ ಮೂರ್ತಿ. ಮಹಿಳೆಯರು ದೇಶದ ಮುಖ್ಯ ವಾಹಿನಿಯಲ್ಲಿ, ಅಭಿವೃದ್ಧಿಯಲ್ಲಿ ರಚನಾತ್ಮಕವಾಗಿ, ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳಬೇಕು ಎಂಬ ಮಾತನ್ನು ಹೇಳುತ್ತಾ ಬಂದವರು. 21 ನೆಯ ಶತಮಾನದ

ಕನ್ನಡದ ಪ್ರಮುಖ ಲೇಖಕರಲ್ಲಿ ಮುಂಚೂಣಿಯಲ್ಲಿರುವಂತಹ ಲೇಖಕರು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸಮದಂಡಿಯಾಗಿ ಸಾಹಿತ್ಯವನ್ನು ರಚಿಸಿ ಅಂತರಾಷ್ಟ್ರೀಯ ಮಟ್ಟದಲ್ಲಿ ಜನಪ್ರೀತಿಯನ್ನು ಪಡೆದ ಸಾಹಿತಿಯೂ ಹೌದು ಎಂದು ಸುಧಾಮೂರ್ತಿ ಅವರ ಸಾಧನೆಗಳ ಪರಿಚಯವನ್ನಿತ್ತರು.

ಮುಂಬೈ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಸಂದರ್ಶಕ ಪ್ರಾಧ್ಯಾಪಕರಾದ ಡಾ. ಶ್ಯಾಮಲಾ ಪ್ರಕಾಶ್ ಅವರು ಹಾಡಿದ ದಾಸವಾಣಿಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಲಾಯಿತು. 'ಸಿರಿತನ ಹಿರಿತನಗಳ ಸಮ್ಮಿಲನದ ಶಕ್ತಿ ಸುಧಾಮೂರ್ತಿ ' ವಿಷಯದ ಕುರಿತು ವಿಭಾಗದ ಸಂದರ್ಶಕ ಪ್ರಾಧ್ಯಾಪಕರಾದ ಡಾ. ಉಮಾ ರಾಮರಾವ್ ಮಾತನಾಡಿದರು. ಅವರ ಸಾಹಿತ್ಯ ಸಾಧನೆಯ ಕುರಿತು ಪ್ರತಿಭಾ ರಾವ್, ಪ್ರವಾಸ ಕಥನಗಳ ಕುರಿತು ಸವಿತಾ ಅರುಣ್ ಶೆಟ್ಟಿ, ಕಾದಂಬರಿಗಳಾದ 'ಅತಿರಿಕ್ತೆ'ಯ ಕುರಿತು ರಾಜಶ್ರೀ ಶೆಟ್ಟಿ, 'ಮಹಾಶ್ವೇತೆ'ಯ ಕುರಿತು ಶಶಿಕಲಾ ಹೆಗಡೆ, 'ಋಣ' ದ ಕುರಿತು ಅನಿತಾ ಪೂಜಾರಿ ತಾಕೋಡೆ, 'ತುಮುಲ'ದ ಕುರಿತು ಅಂಬಿಕಾ ದೇವಾಡಿಗ, 'ಯಶಸ್ವಿ' ಕೃತಿಯ ಕುರಿತು ವಿದ್ಯಾ ರಾಮಕೃಷ್ಣ, 'ಡಾಲರ್ ಸೊಸೆ'ಯ ಕುರಿತು ಗಾಯತ್ರಿ ನಾಗೇಶ್, 'ಪರಿಧಿ'ಯ ಕುರಿತು ಕಲಾ ಭಾಗ್ವತ್ ಮಾತನಾಡಿದರು. ಅವರ 'ಥ್ರೀ ಥೌಸಂಡ್ ಸ್ಟಿಚಸ್' ಕೃತಿಯ ಕುರಿತು ವಿಭಾ ಪುರೋಹಿತ್, 'ಸಾಮಾನ್ಯರಲ್ಲಿ ಅಸಾಮಾನ್ಯರು 'ಕೃತಿಯ ಕುರಿತು ಸುರೇಖಾ ಹರಿಪ್ರಸಾದ್ ಶೆಟ್ಟಿ, 'ಆಂಗ್ಲ ಭಾಷೆಯಲ್ಲಿ ಬಾಲ ಸಾಹಿತ್ಯ' ದ ಬಗ್ಗೆ ವಿಕ್ರಮ್ ಜೋಶಿ, 'ನಾ ಕಂಡಂತೆ ಸುಧಾಮೂರ್ತಿ ' ಈ ವಿಷಯದ ಬಗ್ಗೆ ಗೀತಾ ಮಂಜುನಾಥ್ ಮಾತನಾಡಿದರು. ನಳಿನಾ ಪ್ರಸಾದ್ ಅವರು ಸುಧಾಮೂರ್ತಿ ಅವರ ಅನುಭವ ಕಥನ ತುಣುಕನ್ನು ವಾಚನಗೈದರು. ಮುಂಬೈ ವಿವಿ ಕನ್ನಡ ವಿಭಾಗದ ಸಹಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ ಅವರು ಕಾರ್ಯಕ್ರಮವನ್ನು ಸಂಯೋಜಿಸಿ ನಿರೂಪಿಸಿದರು. ಐ ಲೇಸಾ ತಂಡ ಶಾಂತಾರಾಮ ಶೆಟ್ಟಿ, ಗೋಪಾಲ ಪಟ್ಟೆ, ಸುರೇಂದ್ರ ಕುಮಾರ್ ಮಾರ್ನಾಡ್ ಸಹಕರಿಸಿದರು. ದೇಶ ವಿದೇಶಗಳ ಅನೇಕ ಆಸಕ್ತರು ಕಾರ್ಯಕ್ರಮವನ್ನು ಅಂತರ್ಜಾಲ ತಾಣದಲ್ಲಿ ವೀಕ್ಷಿಸಿದರು.

## ಟ್ವಿಟರ್ ನಲ್ಲಿ ಕನ್ನಡ

**ಏನ್ರಪ್ಪ ಕನ್ನಡಿಗರೆ ಕೇಳಿದ್ರಾ ವಿಷಯ! -**

ನೆನ್ನೆ ಬಂದ ಅಪ್ಡೇಟ್ನಲ್ಲಿ ಟ್ವಿಟರ್ ವೇದಿಕೆಯೊಳಗೆ ಹೊಸದಾಗಿ ನಾಲ್ಕು ಭಾರತ ಭಾಷೆಗಳನ್ನು ಉಪಯೋಗಿಸಬಹುದು. ಅದರಲ್ಲಿ ನಮ್ಮ ಹೆಮ್ಮೆಯ ಸಿರಿಗನ್ನಡ ಭಾಷೆ ಕನ್ನಡ ಕೂಡ ಒಂದು.

ಜಗತ್ತಿನಾದ್ಯಂತ ಅತಿ ಹೆಚ್ಚು ಮಾತನಾಡುವ ಮೂವತ್ತು ಭಾಷೆಗಳಲ್ಲಿ ಕನ್ನಡವು ಸಹ ಒಂದು. ಭೂಮಿಯ ೦.೫೮% ರಷ್ಟು ಜನ ಕನ್ನಡವನ್ನು ಬಳಸುತ್ತಾರೆ. ಮತ್ತೆ ಎಲ್ಲರೂ ತಯಾರಾ ನಿಮ್ಮ ಮೊದಲ ಅಚ್ಚ ಕನ್ನಡದಲ್ಲಿರುವ ಟ್ವೀಟ್ ಮಾಡೋಕೆ?

Twitter has recently announced introduction of 4 new Indian languages namely Kannada, Gujurathi, Marathi and Tamil. Kannada is one of the top 30 most spoken languages in the world. Around 0.58% of the world population uses kannada. So ready to make your first tweet in kannada?

## Matrimonial

Alliance invited for a Stanika kannada Girl DOB: 23.02.1996 Time: 2.10a.m. Place: Mumbai, Nakshatra: Ashwini, Rashi: Mesha, Gotra: Angirasa, Height:5ft 7inches, Caste: Stanika Brahmin, Working Location: MNC Company in Mumbai.

Contact: Mrs. Hema Rao    Contact No.: 9850803518

Email Id: hemarao01@gmail.com

# ಕರ್ನಾಟಕಕ್ಕೆ ಬಾರದೆಯೇ ನಾನು ಊರಿಗೆ ಬಂದು ಹೋದ ಕಥೆ

✍ ಅನುಪ್ ಶ್ರೀನಿವಾಸ್ ಭಟ್

ಅದು ೨೦೧೭ರ ಜೂನ್ ಮೊದಲ ವಾರ. ಕರ್ನಾಟಕ ಬಿಟ್ಟು ನಾನು ಆಗಲೇ ಐದು ವರ್ಷಗಳಾಗಿದ್ದವು. ಈ ವಾರಾಂತ್ಯ ಕೂಡ ಊರಿಗೇನು ಹೋಗುತ್ತಿಲ್ಲ. ಆದರೆ ಮುಂದಿನ ಎರಡು ದಿನಗಳು ನಡೆದದ್ದನ್ನೆಲ್ಲಾ ನೋಡಿದಾಗ ಹೋಗಿ ಬಂದ ಹಾಗೆಯೇ ತೋರಿತು.

ಹನ್ನೆರಡು ವರ್ಷಗಳ ಹಿಂದೆ ಪಿಯುಸಿ ಮುಗಿಸಿ ಜೀವನದಲ್ಲಿ ಮೊದಲ ಬಾರಿ ಹೋಸ್ಟೆಲಿಗೆ ಹೋದಾಗ ಇನ್ನೂ ಸರಿಯಾಗಿ ನನಗೆ ಮೀಸೆ ಬಂದಿರಲಿಲ್ಲ. ಮಂತ್ರಾಲಯದ ಹತ್ತಿರದದಿಂದ ದೂರದ ಮಂಗಳೂರಿಗೆ ಬಂದಿದ್ದ ಪ್ರದೀಪ ಹಾಗು ಸತೀಶ ಎರಡು ದಿನದಲ್ಲೇ ಬಹಳ ಹತ್ತಿರವಾಗಿ ಕೊನೆಗೆ ರೂಮ್ ಮೇಟ್ ಗಳಾಗಿ ಬಿಟ್ಟೆವು. ಅವರಿಬ್ಬರಿಗೂ ಕನ್ನಡ ಚೆನ್ನಾಗಿ ಬರುತ್ತಿದ್ದ ಕಾರಣ ನಮ್ಮಲ್ಲಿ ಕನ್ನಡದಲ್ಲೇ ಮಾತನಾಡುತ್ತಿದ್ದರು. ತೆಲುಗು ಮಾಧ್ಯಮದಲ್ಲಿ ಕಲಿತು, ಆಂಧ್ರದಲ್ಲೇ ಇದ್ದ ಕಾರಣ ಅವರೊಳಗೆ ತೆಲುಗಿನಲ್ಲಿ ಮಾತನಾಡುತ್ತಿದ್ದರು. ನಾನು ಮತ್ತು ಅವರು ಒಟ್ಟಿಗೆ ಇದ್ದಷ್ಟು ಸಮಯ ನಮ್ಮ ನಮ್ಮ ಊರುಗಳ ಬಗ್ಗೆ, ತಿಂಡಿ ತಿನಿಸುಗಳ ಬಗ್ಗೆ, ಸಿನಿಮಾ ಬಗ್ಗೆ, ಪೂಜೆ ಸಂಪ್ರದಾಯಗಳ ಬಗ್ಗೆ, ಕನ್ನಡ-ತೆಲುಗಿನ ಬಗ್ಗೆ ತಮಾಷೆಯ ಜಗಳಗಳು ನಡೆಯುತ್ತಲೇ ಇದ್ದವು. ಬೆಂಗಳೂರು, ಹೈದರಾಬಾದಿನ ಬಗ್ಗೆಯಂತೂ ವಾಗ್ವಾದ ಶುರುವಾದಾಗ ನಮ್ಮ ಜಗಳ ಬಿಡಿಸಲು ಬೇರೆ ರೂಮಿನಿಂದ ಮುಂಬಯಿಯವರೇ ಬಂದು, ನಿಮ್ಮಿಬ್ರ ಊರಿಗಿಂತಲೂ ಮುಂಬಯಿಯೇ ಮೇಲು, ಮುಚ್ಕೊಂಡು ಕೂತ್ಕೊಳ್ಳೀ ಅಂತ ಬಯ್ದು ಹೋಗುತ್ತಿದ್ದರು. ಈಗಿನ ಪರಿಸ್ಥಿತಿಯ ವ್ಯಂಗ್ಯ ನೋಡಿ. ಅವರಿಬ್ಬರೂ ಬೆಂಗಳೂರಲ್ಲಿದ್ದರೆ, ನಾನು ಹೈದರಾಬಾದಿನಲ್ಲಿದ್ದೆ!

ಸರಿ, ಪೀಠಿಕೆ ಮುಗಿಸಿ ಈಗ ಕಥೆಯ ಕಡೆಗೆ ಬರುವೆ.

ಪ್ರದೀಪನ ಮದುವೆ ನಿಶ್ಚಯವಾಗಿತ್ತು. ಆದೋನಿ ಪಟ್ಟಣದಿಂದ ಸ್ವಲ್ಪ ದೂರ ಇರುವ ಅವರ ಹಳ್ಳಿಯಲ್ಲಿ. ಇದೇನಯ್ಯ ಹಳ್ಳಿಯಲ್ಲಿ ಅಂತ ನಾನು ಕೇಳಿದಾಗ, ನಮ್ಮ ಕಡೆ ಹೀಗೇನೇ, ಪೇಟೆಯಲ್ಲಿ ಮಾಡಿದರೆ ಹಳ್ಳಿಯ ಹಿರಿಯರೆಲ್ಲ ಬಯ್ತಾರೆ. " ಬೆಂಗಳೂರಿಗೆ ಹೋಗಿ ಒಗಲು ಜಾಸ್ತಿಯಾಗಿದೆ, ನಾವೆಲ್ಲ ಬರೋದ್ ಬೇಡವೇನು?" " ಬೆಂಗಳೂರಿಕಿ ವೆಳ್ಳೀ ಪೆದ್ದ ಏಮೋ ಪೀಕಾನು ಅನಿ ಅನುಕುನ್ನಾಡಾ ಏಂಟಿ" ಅಂತೆಲ್ಲಾ ಬಯ್ಗುಳ ಕೇಳಬೇಕಾಗುತ್ತೆ, ಅದ್ಕೆ ಹಳ್ಳಿಯಲ್ಲಿ ಅಂತ ಹೇಳಿದ.

ಸರಿಯಪ್ಪಾ, ನಾನೂ ಹಳ್ಳಿಯವನೇ. ಹಳ್ಳಿಯೆಂದು ಮೂಗು ಮುರಿಯುತ್ತಿಲ್ಲ, ಆದ್ರೆ ಮದುವೆ ಅಂದಾಗ ಪೇಟೆಗಳಲ್ಲಿರುವ ಮದುವೆ ಮಂಟಪಗಳಲ್ಲಿ ಒಳ್ಳೆಯ ವ್ಯವಸ್ಥೆಗಳಿರುತ್ತವಲ್ಲಾ, ಹಳ್ಳಿಯಲ್ಲಿ ಆದಾಗ ಅವೆಲ್ಲ ಇರುತ್ತವೆಯೆ, ಆಮೇಲೆ, ಅಲ್ಲಿ ಮದುವೆಗೆ ಬರುವವರಲ್ಲಿ ಯಾರೂ ಪರಿಚಯಸ್ಥರು ನನಗೆ ಇರಲ್ವಲ್ಲಾ, ಹೇಗಪ್ಪ ಕಾಲಹರಣ ಈ ಸುಡುಬಿಸಿಲಲ್ಲಿ ಅಂತ ಅಂದುಕೊಳ್ಳುತ್ತಾ, ರಾತ್ರಿ ಹನ್ನೊಂದಕ್ಕೆ ಹೈದರಾಬಾದಿನ ನಾಮಪಲ್ಲಿ ನಿಲ್ದಾಣದಿಂದ ರೈಲು ಹತ್ತಿದೆ.

ಬೆಳಿಗ್ಗೆ ಸುಮಾರು ೬-೭ ಕ್ಕೆ ಆದೋನಿಯಲ್ಲಿ ಸತೀಶ ಕಾರಿನಲ್ಲಿ ಬಂದು ನನ್ನನ್ನು ಕರೆದುಕೊಂಡು ಮನೆಗೆ ಹೋದ. ನಾಲ್ಕು ವರ್ಷಗಳ ಹಿಂದೆ ಇದೇ ಸತೀಶನ ಮದುವೆಗೆ ಪುಣೆಯಿಂದ ಆದೋನಿಗೆ ಬೆಳಿಗ್ಗೆ ಬಂದು ಮಧ್ಯಾಹ್ನ ವಾಪಾಸು ಹೋಗಿದ್ದೆ. ಆದರೆ ಅಂದು ಬೆಳ್-ಬೆಳಿಗ್ಗೆ ತಿಂದಿದ್ದ ಒಗ್ಗಣ್ಣಿ ಹಾಗು ಮೆಣಸಿನಕಾಯಿ ಬಜ್ಜಿಯ ಸ್ವಾದ ಮರೆತಿರಲಿಲ್ಲ. "ಲೇ ಎಲ್ಲಾರು ಒಳ್ಳೆ ಒಗ್ಗಣ್ಣಿ ಮೆಣಸಿನಕಾಯಿ ಸಿಗೋ ಕಡೆ ನಿಲ್ಸು, ನಿನ್ನ ಮದುವೆ ದಿನ ತಿಂದ ಮೇಲೆ ತಿನ್ನಲೇ ಇಲ್ಲವೇನೋ" ಅಂದೆ. " ಅದ್ಕೆಲೇ ಮನೆಲೇ ಮಾಡಕ್ಕೆ ಹೇಳಿದೀನಿ" ಅಂದ. ಆಹಾ, ಪೂರ್ಣಕುಂಭ ಸ್ವಾಗತ ಸಿಕ್ಕ ಹಾಗೆ ಕಾರಲ್ಲೇ ಸಂತಸಪಟ್ಟೆ. ಸ್ನೇಹಿತ ಅಂದರೆ ಹೀಗಿರಬೇಕು ನೋಡಿ.

ಅಂತೂ, ಪ್ರಾತ:ಕರ್ಮಗಳು ಮುಗಿಸಿ, ಒಂದು ರಾಶಿ ಒಗ್ಗಣ್ಣಿ ತಿಂದು, ೯ರ ಅಂದಾಜಿಗೆ ಹೊರಟು ರೆಡಿಯಾದೆವು. ಸುಮಾರು ೪೦ ನಿಮಿಷಗಳ ಪ್ರಯಾಣ. ಎತ್ತ ನೋಡಿದರೂ ಸಮತಟ್ಟಾದ ಭೂಮಿ. ೨೦೦ಮೀ ಕೂಡ ನೇರ ರಸ್ತೆಗಳಿಲ್ಲದ ಕರಾವಳಿ/ಮಲೆನಾಡಿಗರಿಗೆ ನೋಡಿ ಆಶ್ಚರ್ಯವಾದೀತು.ಕಾಲೇಜಿನ ಕ್ರೀಡಾಂಗಣವೋ ಎಂಬಂತೆ ಹದವಾಗಿದೆ. ಹೆಚ್ಚಿನವು ಭತ್ತದ ಗದ್ದೆಗಳು;ಜೂನ್ ಮೊದಲ ವಾರವಾಗಿದ್ದರಿಂದ ಉತ್ತು, ಬಿತ್ತನೆಗೆ ತಯಾರಾಗಿ ನಿಂತಿದ್ದವು. ಕೆಲವೆಡೆ ಎಡ ಬಲ ತಿರುಗಿ, ಬಹಳಷ್ಟು ಕಿರಿದಾದ, ಹಳ್ಳಪೂರಿತ ಹಳ್ಳಿಯ ಮಾರ್ಗಗಳ ಮೂಲಕ ಸರಿದು ಕೊನೆಗೂ ಇವನ ಮದುವೆಗೆ ಬಂದೆವು. ಮದುವೆ ಊರ ಗ್ರಾಮ ದೇವಾಲಯದಲ್ಲಾಗಿತ್ತು. ಬಹಳ ಸಣ್ಣ ಗುಡಿ. ಆದರೆ ಎಲ್ಲಾ ಹಿರಿಯರೂ ಅಲ್ಲಿದ್ದರು. ತಾಳಿ ಕಟ್ಟುವ ವೇಳೆ ಎಲ್ಲರೂ ಬಂದು ಅಕ್ಷತೆ ಹಾಕುವವರು. ಆ ಹೊತ್ತಿಗೇ ಜನಸಾಗರವಿತ್ತು. ಏನಪ್ಪಾ ಇಷ್ಟೊಂದು ಜನ ಎಂದು ವಿಚಾರಿಸಲಾಗಿ, "ಅರೆ! ಈಗ ಮುಹೂರ್ತ ಅಲ್ಲವೇ, ಅದಕ್ಕೆ ! ನಮ್ಮ ಕಡೆ ಮುಹೂರ್ತ ಎಷ್ಟೇ ಹೊತ್ತಿಗಿರಲಿ, ಅದೇ ಹೊತ್ತಿಗೆ ಜನ ಬಂದು ಬಿಡುತ್ತಾರೆ. ಕಳೆದ ವಾರ ಒಂದು ಮದುವೆ ಮುಹೂರ್ತ ಬೆಳಿಗ್ಗೆ ಆರೂ ಮುಕ್ಕಾಲಕ್ಕೆ ಇತ್ತು. ಆಗಲೂ ಇಷ್ಟ ಮಂದಿ ಇದ್ದರು ಅಂದದ್ದು ಕೇಳಿ ಬಹಳ ಖುಷಿಯೆನಿಸಿತು. ಈ ವಿಚಾರ ನನಗೆ ಮೊದಲು ತಿಳಿದಿರಲಿಲ್ಲ.

ನಮ್ಮ ಊರ ಕಡೆ ಎಷ್ಟೇ ಹೊತ್ತಿಗೆ ಮುಹೂರ್ತವಿದ್ದರೂ ಜನ ಊಟದ ಸಮಯಕ್ಕೆಯೇ ಬರುವುದು. ೧೧ ಘಂಟೆಗೆ ೨೫೦ ಜನ ಇದ್ದು, ಊಟಕ್ಕಾಗುವಾಗ ೧೦೦೦ ಮಂದಿಯ ಸಂಖ್ಯೆ ದಾಟುವುದು ನಮ್ಮಲ್ಲಿ ಸರ್ವೇಸಾಧಾರಣ. ಈಗ ಬಂದಲ್ಲಿಯ ಕ್ರಮ ನೋಡಿ ಇದೇ ಸರಿಯೆನಿಸಿತು. ನಾನು ಅತೀ ಹತ್ತಿರದ ಕಸಿನ್ ಗಳ ಮದುವೆ ಬಿಟ್ಟರೆ ಎಲ್ಲೂ ೧೨ ರ ಮೊದಲೆ ಮದುವೆಗಳಿಗೆ ಹೋಗಿದ್ದೇ ನೆನಪಾಗುತ್ತಿಲ್ಲ.ತಾಳಿ ಕಟ್ಟುವ ಸಮಯದಲ್ಲಿ ಅಲ್ಲಿದ್ದು, ನಾಲ್ಕು ಕಾಳು ಅಕ್ಷತೆ ಹಾಕದಿದ್ದರೆ ಅದೆಂತಹ ಹಾಜರಿ ಎಂದು ತೋರಿತು. (ಈ ಘಟನೆಯ ನಂತರ ನಮ್ಮ ಊರಲ್ಲೂ ಮದುವೆಗೆ ಹೋಗುವಾಗ ಸಾಧ್ಯವಾದಷ್ಟು ಮುಹೂರ್ತಕ್ಕೆ ತಲುಪುವಂತೆ ಹೋಗಲು ಪ್ರಯತ್ನ ಮಾಡುತ್ತಿದ್ದೇನೆ.)

ದೇಗುಲಗಳ ಬಳಿಯೇ ವಠಾರದಂತಹ ಮನೆಗಳು. ಕಣ್ಣಲ್ಲಿ ಮುಂಚೆ ನೋಡಿದ್ದರೂ ನಾನು ಒಳಗೆ ಹೋಗಿ ನೋಡಿರಲಿಲ್ಲ. ಎಲ್ಲಾ ಮನೆಗಳಲ್ಲೂ ಸ್ವಂತ ಮಗನ/ಮಗಳ ಮದುವೆಯಂತಹ ವಾತಾವರಣ. ಎಲ್ಲಾ ಮನೆಗಳ ಮುಂದೆಯೂ ಜನ ಕೂತಿದ್ದಾರೆ. ನಾನೂ ಅದೇ ರೀತಿ ಯಾರದ್ದೋ ಮನೆಯ ಮುಂದೆ ಕೂತಿದ್ದೆ. ಅವರ ಶೌಚಾಲಯವೂ ಬಳಸಿದೆ. ಹೊರಬರುತ್ತಿದ್ದಂತೆ ಯಾವುದೋ ಹೆಂಗಸು( ಆ ಮನೆಯಾಕೆ?) ಟವಲ್ ಕಾವಾಲಾ ಅಂತ ಕೇಳಿದರು. ಯಾಕೆ ಹೇಳದೇ ಕೇಳದೇ ಬಾತ್ರೂಮಿಗೆ ಹೋದೆ ಅಂತ ಕೇಳುತ್ತಿದ್ದಾರೋ ಎಂದು ಒಂದು ಕ್ಷಣ ಅನಿಸಿ ಅವರನ್ನೇ ನೋಡಿದೆ. ನನಗೆ ತೆಲುಗು ಬರುತ್ತಿಲ್ಲವೇನೋ ಅಂದುಕೊಂಡು ಟವಲ್ ಬೇಕೆನಪ್ಪಾ ಅಂತ ಕನ್ನಡದಲ್ಲಿ ಕೇಳಿದರು. ಆಗ ನನ್ನ ಮಂಡೆಯೊಳಗೆ ಟ್ಯೂಬ್ಲೈಟ್ ಹೋಳೆದು, "ಬೇಡ, ಬೇಡ, ವದ್ದಂಡಿ" ಎಂದು ತಡಬಡಿಸಿದೆ. ೭-೮ ವರ್ಷಗಳಿಂದ ನಗರವಾಸಿಯಾಗಿ ಈ ಥರದ ಅನುಭವಗಳು ಮರೆತೇಹೋಗಿದ್ದವು. ಈ ಹೊಸ ಅನುಭವ ಮನಸ್ಸಿಗೆ ಮುದ ನೀಡಿತು. ನಮ್ಮ ಪರ್ಸನಲ್ ಸ್ಪೇಸ್, ಪ್ರೈವಸಿ ಮುಂತಾದಂತಹ ಆಧುನಿಕ ತತ್ವಗಳಿಗೆ ಅಲ್ಲಿ ಜಾಗವೇ ಇಲ್ಲ!

ಸತೀಶನೂ ಪ್ರದೀಪನೂ ದೂರದ ಸಂಬಂಧಿಗಳಾಗಿದ್ದರಿಂದ ಸತೀಶನನ್ನು ಮಾತನಾಡಿಸುವವರು ಹಲವರಿದ್ದರು. ಒಬ್ಬನೇ ಸುಮಾರು ಹೊತ್ತು ಕೂತಿದ್ದರಿಂದ ಅಲ್ಲಿಯವರ ಮಾತು ಎಲ್ಲಾ ಚನ್ನಾಗಿ ಕೇಳಿಸುತ್ತಿತ್ತು. ಬಹಳಷ್ಟು ಮಂದಿ ಕನ್ನಡ ಹಾಗು ತೆಲುಗನ್ನ ಮಿಕ್ಸ್ ಮಾಡಿ ಮಾತನಾಡುತ್ತಿದ್ದರು. ಕೆರೆ ದಡ ದಡ ಕೆರೆ ಎಂಬ ಮಕ್ಕಳ ಆಟದಂತೆ ಒಮ್ಮೊಮ್ಮೆ ಕನ್ನಡದಲ್ಲೂ ಒಮ್ಮೊಮ್ಮೆ ತೆಲುಗಲ್ಲೂ ಮಾತನಾಡುತ್ತಿದ್ದರು. " ಲೇ ಈ ಏರಿಯಾದಲ್ಲಿ ಕನ್ನಡ ತೆಲುಗು ಮಾತೃಭಾಷೆ ಸರಿಸುಮಾರು ಶೇ.೫೦ ಇದೆ ಅಂದೆಯಲ್ಲಾ, ಕರೆಕ್ಟಾಗಿ ಹೇಳಿದ್ದಿ ಕಣೊ, ಆದರೆ ಈ ಎರಡೂ ಭಾಷೆಗಳನ್ನು ಮಾತನಾಡುವ ವ್ಯಕ್ತಿಯ ಮಾತೃಭಾಷೆ ಹೇಗೆ ಕಂಡುಹಿಡಿಯುವುದು?" ಎಂದು ಕೇಳಿದೆ ಸತೀಶನಲ್ಲಿ. ಅದಕ್ಕೆ ಅವನು, "ತುಂಬಾ ಎಕ್ಸೈಟ್ ಆದರೆ ಮಾತ್ರ ಗೊತ್ತಾಗುತ್ತೆ" ಎಂದು ಹೇಳಿದ್ದು ನೆನೆಸಿದಾಗ ಇನ್ನೂ ನಗು ಬರುತ್ತದೆ. ಆ ದಿನ ನಾನು ಬಹಳಷ್ಟು ವಿಷಯಗಳನ್ನು ಕಲಿತೆ. ಹೆಚ್ಚಿನವರು ಜೀವನಪೂರ್ತಿ ಆಂಧ್ರದಲ್ಲೇ ಇದ್ದವರು. ಆಡಳಿತ ಭಾಷೆ, ಶಾಲೆಯಲ್ಲಿ ಕಲಿಸುವ ಭಾಷೆ, ಪಟ್ಟಣಗಳಲ್ಲಿ ವ್ಯಾವಹಾರಿಕ ಭಾಷೆ ಎಲ್ಲವೂ ತೆಲುಗು. ಆದರೂ ಅವರು ಕನ್ನಡವನ್ನು ಮರೆತಿಲ್ಲ. ಅದು ಅವರ ಜೀವನದ ಭಾಗವಗಿಯೇ ಇದೆ. ತೆಲುಗು ಮಾತೃಭಾಷಿಕರೂ ಅಷ್ಟೇ. ಇಲ್ಲಿ ಕನ್ನಡ ಯಾಕೆ ಎಂದು ನಮ್ಮ ಭಾಷೆಯನ್ನು ಮೆಟ್ಟಿ ನಿಂತಿಲ್ಲ. ಕನ್ನಡದ ಪ್ರಭಾವ ಅಷ್ಟಾಗಿ ಇಲ್ಲದ ಊರುಗಳಿಂದ ಮದುವೆಯಾಗಿ ಇಲ್ಲಿ ಬಂದಿರುವ ಹೆಣ್ಣು ಮಕ್ಕಳೆಲ್ಲರೂ ಕನ್ನಡ ಕಲಿತಿದ್ದಾರೆ. ನನ್ನ ಗೆಳೆಯನ ತಾಯಿಯ ಕಥೆಯೂ ಅದುವೇ. ಮದುವೆಯ ನಂತರವೇ ಅವರು ಕನ್ನಡ ಕಲಿತದ್ದು. ನಮ್ಮ ದಕ್ಷಿಣ ಕನ್ನಡದಲ್ಲಿ ತುಳು ಹಾಗು ಕನ್ನಡವನ್ನು ಒಟ್ಟೊಟ್ಟಿಗೆ ಮಾತನಾಡುವಂತೆ ಇಲ್ಲಿ ಕನ್ನಡ ಹಾಗು ತೆಲುಗು ಮಾತನಾಡುತ್ತಿದ್ದಾರೆ. ಎಷ್ಟೋ ಬಾರಿ ನಾವು ಆ ಭಾಷೆಯಿಂದ ಈ ಭಾಷೆಗೆ ಹಾರಿದ್ದು ನಮಗೇ ತಿಳಿದಿರುವುದಿಲ್ಲ.

ಇಲ್ಲಿಯ ಜನರು ಯಾವುದೇ ವೇದಿಕೆಯ ಬೆದರಿಕೆಗಾಗಲಿ, ಸರ್ಕಾರದಿಂದ ಸಿಗುವ ಸವಲತ್ತುಗಳಿಗಾಗಲಿ, ಯಾವುದೇ ಆರ್ಥಿಕ ಲಾಭಕ್ಕಾಗಲಿ ಕನ್ನಡ ಮಾತನಾಡುತ್ತಿಲ್ಲ. ಅದು ಅವರ ಭಾಷೆ-ಅಷ್ಟೇ. ಅದಕ್ಕೆ ಪ್ರೀತಿಯಿಂದ ಮಾತನಾಡುತ್ತಾರೆ, ಪೋಷಿಸುತ್ತಿದ್ದಾರೆ. ಸತೀಶ ಹಾಗು ಪ್ರದೀಪ ಯಾವಗಲೂ ಹೇಳುತ್ತಿದ್ದರು: ಕರ್ನಾಟಕದ ಗಡಿಯಂಚಲ್ಲಿರುವ ಆಂಧ್ರದ ಹಳ್ಳಿಗಳಲ್ಲಿ ಜನರಿಗೆ ಕನ್ನಡ ಚನ್ನಾಗಿ ಬರುತ್ತದೆ, ಆದರೆ ಪಟ್ಟಣ/ನಗರಗಳಿಗೆ ಹೋದರೆ ಕನ್ನಡದ ಪ್ರಭಾವ ಬಹಳ ಕಡಿಮೆ. ಇದನ್ನು ನಾನು ಸ್ವತ: ನೊಡಿ ತಿಳಿದಿದ್ದೇನೆ.ಕೋಲಾರದಿಂದ ಹಿಡಿದು ಬೀದರ್ ವರೆಗೆ ನಮಗೆ ತೆಲುಗು ರಾಜ್ಯಗಳೊಂದಿಗೆ ೭೦೦ಕಿ ಮೀ ಗೂ ಅಧಿಕ ಗಡಿರೇಖೆಯಿದೆ. ಮುಳಬಾಗಿಲಿನಾಚೆ ಪಲಮನೇರು, ಚಿತ್ತೂರುಗಳು ತಿರುಪತಿಗೆ ಹೊಗುವಾಗ ದಾರಿಯಲ್ಲೇ ಸಿಗುತ್ತವೆ. ಆದರೆ ಅಲ್ಲಿ ಕನ್ನಡ ನಡೆಯದು. ಕರ್ನೂಲು, ಅನಂತಪುರ, ಜಹೀರಾಬಾದುಗಳಲ್ಲೂ ಕನ್ನಡ ಬಹಳ ಉಪಯೋಗಕ್ಕೆ ಬಾರದು. ನಮ್ಮವರು ವ್ಯವಹಾರಗಳಲ್ಲಿ ಮುಂದೆ ಬಾರದೇ ಇದ್ದದ್ದು ನಮ್ಮ ಭಾಷೆಯ ಬೆಳವಣಿಗೆಗೆ ಮುಳುವಾಯಿತು ಅನಿಸುತ್ತಿದೆ.

ಮಾರನೆಯ ದಿನ ಹತ್ತಿರದಲ್ಲೇ ಇರುವ ಮಂತ್ರಾಲಯಕ್ಕೆ ಹೋಗಿ ರಾಯರ ದರುಶನ ಪಡೆದೆ. ಅಲ್ಲೂ ಹೀಗೆಯೇ ಅಲ್ಲವೇ? ಕರ್ನಾಟಕದ ಹೊರಗೆ ಕನ್ನಡ ಪ್ರಾಬಲ್ಯ ಮೆರೆಯುತ್ತಿರುವ ಊರೆಂದರೆ ಅದು ಮಂತ್ರಾಲಯ ಮಾತ್ರ.

ಕನ್ನಡ ಎಲ್ಲಾ ಗಡಿ ಪ್ರದೇಶಗಳಲ್ಲೂ ದುರ್ಬಲವಾಗಿರುತ್ತದೆ ಎಂದು ಯಾವಾಗಲು ನನಗೆ ಬೇಸರವಿತ್ತು.ಈ ಎರಡು ಮೂರು ದಿನಗಳ ಅನುಭವ ಮಾತ್ರ ಹಿಂದೆಂದೂ ಪಡೆದಿರಲಿಲ್ಲ. ಬೆಂಗಳೂರಲ್ಲಿ ನನ್ನಲ್ಲಿ ಹಿಂದಿಯಲ್ಲಿ ಮಾತನಾಡಿಸುವ ಅಂಗಡಿಯವರನ್ನು, ಆಟೋದವರನ್ನು, ತಳ್ಳುಗಾಡಿ-ಪಾನಿಪುರಿಯವರನ್ನು ನೋಡಿ ನೋಡಿ ಸಾಕಾಗಿತ್ತು. ಕನ್ನಡವನ್ನು ನಮ್ಮ ರಾಜ್ಯದ ಗಡಿಯಾಚೆ ಕೇಳಿ ಪರಮಾನಂದವಾಯಿತು.

ಇದ್ದಷ್ಟು ಸಮಯವೂ ಕನ್ನಡದಲ್ಲೇ ಮಾತನಾಡಿದೆ.ಕನ್ನಡಿಗರೇ ಹೆಚ್ಚಾಗಿ ಬರುವ ದೇವಸ್ಥಾನಕ್ಕೂ ಹೋಗಿ ಬಂದೆ. ಕೊನೆಗೆ ರಾತ್ರಿ ಆಂಧ್ರ ಸಾರಿಗೆಯ ಬಸ್ಸಲ್ಲಿ ಹೈದರಾಬಾದಿಗೆ ಹೋದೆ. ಹೊರಡುವಾಗ ಮದುವೆ ಮನೆಯಿಂದ ನನಗೆ ಬಹಳ ಇಷ್ಟವಾದ ಪಚ್ಚಕರ್ಪೂರ ಹಾಕಿದ ತಿರುಪತಿ ಲಡ್ಡು ವನ್ನೇ ಹೋಲುವ ಲಡ್ಡೂ, ಒಬ್ಬಟ್ಟೂ ಇತ್ಯಾದಿ ಕೊಟ್ಟಿದ್ದರು.

ಬೆಳಿಗ್ಗೆ ಆಫೀಸಿನಲ್ಲಿ " ಅರೆ ಅನೂಪ್ ಕೈಸಾ ರಹಾ ವೀಕೆಂಡ್? ಗಾಂವ್ ಜಾಕೆ ಆಯಾ ಕ್ಯಾ? ಎಂದು ಒಬ್ಬರು ಕೇಳಿದಾಗ, ಊರಿಗೆ ಹೋಗಿ ಬಂದಂತಹ ಅನುಭವ ಕೊಟ್ಟ ಎರಡು ದಿನಗಳನ್ನು ನೆನೆಸಿದೆ. ಕರ್ನಾಟಕದ ಒಳಗೆ ಬಾರದೆಯೇ ಊರಿಗೆ ಬಂದಂತಹ ಫೀಲ್ ದೊರಕಿಸಿ ಕೊಟ್ಟ ನನ್ನ ಮಿತ್ರದ್ವಯರಿಗೂ, ಅವರ ಕುಟುಂಬದವರಿಗೂ, ಹಳ್ಳಿಯವರಿಗೂ ಮನಸ್ಸಲ್ಲೇ ನಮಿಸಿದೆ. ಜೀವನದಲ್ಲಿ ಮೊದಲಬಾರಿ ಹೋಗಿಬಂದ ಊರು ನನಗೆ ಸ್ವಂತ ಊರಿಗೆ ಹೋಗಿ ಬಂದ ಅನುಭವವನ್ನೇ ಕೊಟ್ಟಿದೆ."ಇಲ್ಲಾ, ಊರಿಗೆ ಹೋಗಿಲ್ಲ, ಆದೋನಿಗೆ ಹೋಗಿದ್ದೆ ಅಷ್ಟೆ" ಎಂದು ಹೇಳಲು ಮನಸ್ಸಾಗಲಿಲ್ಲ. "ಜೀ" ಅಂತ ಹೇಳಿ ಒಬ್ಬಟ್ಟನ್ನು ಹಂಚಿದೆ.

# ಇಂದು ಭಾರತದಲ್ಲಿ ಜನಸಂಖ್ಯೆ ಜಗತ್ತಿನಲ್ಲಿ ಹೆಚ್ಚಿನದಾಗಿದೆ, ಸಮಸ್ಯೆಗಳೇನು?

- ನೇಸರು ವರದಿ

ಈಗ ಈ ಏಪ್ರಿಲ್ ತಿಂಗಳಿನಲ್ಲಿಯೇ ಯುನೈಟೆಡ್ ನೇಶನ್ಸ್ ಒಂದು ಜನಸಂಖ್ಯೆಯ ಬಗ್ಗೆ ವರದಿ ತಂದಿದ್ದು, ಅದರಲ್ಲಿ ಭಾರತದಲ್ಲಿಯೇ ಅತಿ ಹೆಚ್ಚಿನ ಜನಸಂಖ್ಯೆ ಇದ್ದು (142.63 ಕೋಟಿ) ಚೀನಾದ ಜನಸಂಖ್ಯೆಗಿಂತ ಹೆಚ್ಚಾಗಿದೆ ಎಂದಿದೆ. ಇದು ಕೆಲವರಿಗೆ ಒಂದು ಪ್ರಶಸ್ತಿ ಎಂದು ತೋರಿದರೂ ಕೂಡ ಇದರಿಂದ ಬರುವ ತೊಂದರೆಗಳೇನು ಎಂಬುದರ ಬಗ್ಗೆ ಇನ್ನೂ ವಿಚಾರ ನಡೆದಿದೆ. ಈಗ ನೋಡೋಣ ಇದರ ಹಿಂದೆ ನಮಗಿರುವ ಸಮಸ್ಯೆಗಳೇನು ಎನ್ನುವುದನ್ನು.

೧. ಭಾರತದಲ್ಲಿರುವಷ್ಟು ಧರ್ಮಗಳು ಬೇರೆ ಎಲ್ಲಿಯೂ ಇಲ್ಲ. ಇಲ್ಲಿ ಹುಟ್ಟಿದ ಧರ್ಮಗಳೇ ಸಾಕಷ್ಟಿವೆ. ಇನ್ನೂ ಹೊರಗಿನಿಂದ ಬಂದು ಇಲ್ಲಿ ನೆಲೆಸಿರುವ ಧರ್ಮಗಳಾದ ಇಸ್ಲಾಂ, ಕ್ರಿಶ್ಚಿಯಾನಿಟಿ ಕೂಡ ಇವೆ.



೨. ಈ ಎಲ್ಲಾ ಧರ್ಮಗಳಲ್ಲೂ ಜಾತಿ ಪಂಗಡಗಳೆಂದು ಮೇಲು-ಕೀಳು ಕದನಗಳು ಇವೆ. ಎಲ್ಲಾ ಜಾತಿಗಳಿಗೂ ಮೀಸಲಾತಿ ಬೇಕೆಂಬ ಕೂಗು. ರಾಜಕಾರಣಿಗಳಿಂದ ಪ್ರೇರಿತವಾಗಿ ಎಲ್ಲಾ ಕಡೆ ಕೂಗಾಟ ಕದನಗಳು ನಡೆಯುತ್ತಿವೆ.

೩. ಭಾರತದಲ್ಲಿರುವ ಭಾಷೆಗಳು ಬೇರೆ ಇನ್ನೆಲ್ಲೂ ಇಲ್ಲ. ಕಾಡು ಜನರ ಭಾಷೆಗಳಿಂದ ಹಿಡಿದು ದ್ರಾವಿಡ, ಪ್ರಾಕೃತ - ಮಂಗೋಲಿಯನ್ ಭಾಷೆಗಳು ಇವೆ. ಎಲ್ಲವೂ ಪ್ರಾಚೀನವಾದುದರಿಂದ ಯಾವುವೂ ತಗ್ಗಿ ನಡೆಯುವುದಿಲ್ಲ. "ಒಂದು ನಾಡಿಗೆ ಒಂದೇ ಭಾಷೆ ಇರಬೇಕು ಎಂದು ಕೂಗುತ್ತಿದ್ದವರು ಕೂಡ ಇಂದು ಪರೀಕ್ಷೆಗಳಲ್ಲಿ ಹುಡುಗರು ತಮ್ಮ ಭಾಷೆಯಲ್ಲಿ ಉತ್ತರ ನೀಡಬಹುದೆಂದು ಹೇಳುತ್ತಿದ್ದಾರೆ.

೪. ಶೇಕಡ ೨೮ರಷ್ಟು ಪಟ್ಟಗಳಲ್ಲಿದ್ದರೆ ಮಿಕ್ಕ ೭೧ರಷ್ಟು ಮಂದಿ ಹಳ್ಳಿಗಳಲ್ಲಿಯೇ ಇದ್ದಾರೆ. ಅಂದರೆ ಅಲ್ಲಿದ್ದವರಿಗೂ ಎಲ್ಲಾ ಸೌಕರ್ಯ ನೀಡುವುದು ಸಮಸ್ಯೆಯಾಗಿದೆ.

೫. ಅತಿಯಾದ ಬಡತನ ಕೆಲವೆಡೆ ಹೆಚ್ಚಾಗಿ ತೋರುತ್ತದೆ. ಉತ್ತರ ಪ್ರದೇಶ, ಬಿಹಾರ್, ಬಂಗಾಳದಲ್ಲಿ ಇರುವ ಬಡತನದಿಂದ ಆ ಮಂದಿ ಕೆಲಸಕ್ಕಾಗಿ ಬೇರೆಡೆಗೆ ಹೋಗಲೇಬೇಕು. ಆಗ ಬರುವ ಮುದಳಿಕೆಯನ್ನು ತಾಳಿಕೊಂಡು ಅವರು ದುಡ್ಡನ್ನು ಗಳಿಸಿ ದೂರದಲ್ಲಿರುವ ತಮ್ಮ ಕುಟುಂಬಗಳಿಗೆ ಕಳಿಸಬೇಕು.

೬. ಈಗ ಹುಟ್ಟಿರುವ ಮಕ್ಕಳಿಗೆ ವಿದ್ಯಾಭ್ಯಾಸ ಬೇಕೇಬೇಕು. ಆದರೆ ಈ ಕೆಲಸದಲ್ಲಿ ನಮ್ಮ ಸರ್ಕಾರಗಳು, ಸಂಘಟನೆಗಳು, ಮಾಸ್ತರುಗಳು ಎಲ್ಲರೂ ತಮ್ಮ ಕಾರ್ಯವನ್ನು ಮಾಡುತ್ತಿಲ್ಲ. ಸರ್ಕಾರಗಳು ವಿದ್ಯಾಭ್ಯಾಸದ ಮೇಲೆ ತಮ್ಮ ಲೆಕ್ಕಾಚಾರದಾಲ್ಲಿ ಶೇ. ೩ ರಷ್ಟು ನೀಡುತ್ತಿಲ್ಲ. ಹೀಗಾಗಿ ಎಲ್ಲಾ ಸರ್ಕಾರಿ ಶಾಲೆಗಳು ಈಗ ತೆರವಾಗುತ್ತಿವೆ. ಒಂದು ಬಚ್ಚಲು ಮನೆಯನ್ನು ಸರಿಯಾಗಿ ಇಡದಿದ್ದ ಮೇಲೆ ಈ ಸರ್ಕಾರಿ ನೌಕರರ ಹೊಣೆಗಾರಿಕೆ ಏನು? ಇನ್ನು ಮಾಸ್ತರುಗಳು, ಕೇವಲ ತಮ್ಮ ಸಂಬಳ ಬರುವ ಪಿಂಚಣಿಯಾಯನ್ನೇ ನೋಡುತ್ತಿರುವ ಈ ಮಾಸ್ತರುಗಳು ಮಕ್ಕಳಿಗೆ ಕಲಿಸುವುದನ್ನು ನೋಡಿದಾಗ ಹೊಟ್ಟೆ ತಿಳಿಸುತ್ತದೆ. ಇನ್ನು ಖಾಸಗಿ ಶಾಲೆಗಳಲ್ಲಿ ತಂದೆ ತಾಯಿಯರಿಂದ ಹೆಚ್ಚು ಫೀಸು ಸುಲಿಯುವುದೇ ಗುರಿಯಾದುದರಿಂದ. ಅದರಿಂದ ಏನೂ ಫಲವಿಲ್ಲ. ಇನ್ನು ನಮ್ಮ ಮಕ್ಕಳನ್ನು ಇಂಟರ್ ನ್ಯಾಷನಲ್ ಶಾಲೆಗಳಲ್ಲಿ ಕಾನ್ವೆಂಟ್ ಗಳಲ್ಲಿಯೇ ಕಳಿಸಬೇಕು ಎಂಬ ಹುಚ್ಚಿಗೆ ಬಲಿಯಾಗಿ ಆ ಮಕ್ಕಳಿಗೆ ವಾಷಿಂಗ್ಟನ್ ಯಾರು? ಎನ್ನುವುದು ತಿಳಿದಿದೆಯೇ ಪುರೂರವ, ಪ್ರತಾಪ್ ಸಿಂಹ, ಬಿಂಬಸಾರ ಯಾರು ಗೊತ್ತಿಲ್ಲ. ಎಷ್ಟರಮಟ್ಟಿಗೆ ಇದು ಹೋಗಿದೆ ಎಂದರೆ ಈಗ ತರಗತಿಗಳಿಗೆ ಮಕ್ಕಳನ್ನು ಕಳಿಸುತ್ತಾರೆ. ಅಲ್ಲಿ ಗಣಿತಶಾಸ್ತ್ರದ ಪಿತಾ ಪೈಥಾಗೊರಸ್ ಎಂದು ಹೇಳಿಕೊಡುತ್ತಾರೆ.

ಭಾಸ್ಕರಾಚಾರ್ಯರ ಹೆಸರು ಇಲ್ಲ. ಈಗ ಬರೆಯುವ 1,2,3,4 ಗಳು ಅರಬ್ಬಿ ಅಂಕೆಗಳು ಎಂದು ಹೇಳಿಕೊಡುತ್ತಾರೆ. ಅಲ್ಲಿ ತಲೆಮಾಸಿದ ಹುಡುಗರು ಮನೆಗೆ ಬಂದು ಜಗಳವಾಡುತ್ತಾರೆ.


೭.ಇನ್ನು ನೌಕರಿ. ಎಲ್ಲರಿಗೂ ಸರ್ಕಾರಿ ನೌಕರಿಯೆ ಬೇಕು. ಏಕೆಂದರೆ ಅಲ್ಲಿ ತಮ್ಮನ್ನು ಯಾರು ತೆಗೆಯುವುದು ಇಲ್ಲ, ಪಿಂಚಣಿಯು ಸಿಗುತ್ತದೆ, ಅಂತೆ ಲಂಚಕ್ಕೂ ದಾರಿ ಇದೆ ಎಂದು. ಅಷ್ಟು ನೌಕರಿಗಳನ್ನು ಹೆಚ್ಚು ಮಾಡಬೇಕಾದರೆ ಕಾರ್ಖಾನೆಗಳು ಹುಟ್ಟಿರಬೇಕು. ಈಗ ಕಾರ್ಖಾನೆಗಳನ್ನು ಹಾಕಿದರೂ ಕೂಡ ಅಲ್ಲಿ ಕೆಲಸ ಮಾಡಲು ಮಕ್ಕಳಿಗೆ ಬೇಡವೇ ಬೇಡ. ಒಂದು ಮೇಜಿನ ಮುಂದೆ ಕಂಪ್ಯೂಟರ್ನಲ್ಲಿ ಕುಳಿತು ಮಾಡುವಂತಹ ಕೆಲಸಗಳೇ ಬೇಕು. ಯಾರು ಇಂಗ್ಲಿಷ್ ನಲ್ಲಿ ಮಾತಾಡಬಲ್ಲರು ಅವರೇ ಬುದ್ಧಿವಂತರು ಎಂದಾಗಿದೆ.

೮. ಇನ್ನು ನಮ್ಮ ಆಡಳಿತ ಪ್ರಜಾಪ್ರಭುತ್ವ ಎಂದಾಗಿದೆ. ಆದರೆ ದಿಟವಾಗಿ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಎಲ್ಲವೂ ಪರಿವಾರ ವಾದದಿಂದಲೇ ನಡೆಯುವಂತಹವು. ನನಗೆ, ನಿನ್ನ ಹೆಂಡತಿಗೆ, ಮಕ್ಕಳಿಗೆ ಟಿಕೆಟ್ ಕೊಡದಿದ್ದರೆ ಪಾರ್ಟಿಯನ್ನು ಬಿಡುತ್ತೇವೆ ಎನ್ನುವರೇ ಹೆಚ್ಚು. ಎಲ್ಲವೂ ಹಣದ ಮೇಲೆ ನಿಂತಿರುವುದರಿಂದ ದಾರಿಗಳನ್ನು ರಿಪೇರಿ ಮಾಡುವುದರಲ್ಲಿ ಕಮಿಷನ್ ಹೊಡೆದು ಅವರ ಹಲ್ಲಿನ ಗುರುತುಗಳೆಲ್ಲ ದಾರಿಗಳ ಮೇಲೆ ಇಂದು ಕಾಣುತ್ತವೆ. ಈ ಪ್ರಜಾಪ್ರಭುತ್ವದಲ್ಲಿ ಕೆಲಸ ಮಾಡುವುದರಿಂದ ಆಗುವ ಫಾಯಿದೆ ಬೇರೆ ಇನ್ನಾವ ಉದ್ಯೋಗದಲ್ಲಿಯೂ ಇಲ್ಲ ಎಂದು ಮನವರಿಕೆಯಾಗಿ ಕೇವಲ ಕಟ್ಟಿ ಮಾಡಿದ ಪಕ್ಷಗಳೆಷ್ಟು? ಮಗ, ಮೊಮ್ಮಗ, ಮುಟ್ಠಾಳನಾದರೂ ಕೂಡ ಅವನೇ ಮಂತ್ರಿ ಆಗಬೇಕು ಎಂದು ಸಾಧಿಸುವವರೇ ಇವರೆಲ್ಲ. ಇಂತಹ ಸಮಸ್ಯೆಗಳನ್ನು ಎದುರಿಸಿ ಎಲ್ಲಾ ಹೊಟ್ಟೆಗಳನ್ನು ತುಂಬಬೇಕು ಎನ್ನುವುದು ಬಹು ಕಷ್ಟದ ಕೆಲಸ. ನಮಗೆ ದುಡ್ಡು ಕೊಟ್ಟರೆ ನಾವು ಓಟು ಕೊಡುತ್ತೇವೆ ಎಂಬಂತಹ ಮುಟ್ಠಾಳ ಮಂದಿಗೆ ನಾವು ಏನೆನ್ನು ಹೇಳಬಹುದು. ನಮ್ಮ ಸಂವಿಧಾನದಲ್ಲಿ ಹೆಂಡವನ್ನ ನಿಷೇಧಿಸಬೇಕು ಎಂದು ಬರೆದಿದ್ದರೂ ಕೂಡ ಸರ್ಕಾರಗಳೇ ಹೆಂಡ ಮಾರಲು ನಿಂತಿರುವಾಗ ಚುನಾವಣೆಯ ಹೊತ್ತಿನಲ್ಲಿ ಇರುವ ಗಂಡುಗಳು, "ನಮಗೆ ಎಣ್ಣೆ ಕೊಟ್ಟರೆ ಓಟು ಕೊಡುತ್ತೇವೆ" ಎನ್ನುತ್ತಿದ್ದಾರೆ.

೯. ನಮ್ಮಲ್ಲಿ ಈಗ ಅತಿ ದೊಡ್ಡ ಸಮಸ್ಯೆ ಎಂದರೆ ಹೆಣ್ಣು ಮಕ್ಕಳದು ಈಗ 50 ವರ್ಷದಲ್ಲಿ ದುಡ್ಡು ಸಾಲದೆ ಇರುವಾಗ ಎಲ್ಲಾ ಗಂಡ ಹೆಂಡಂದಿರು ತಮ್ಮ ಮಕ್ಕಳನ್ನು ಕಡಿಮೆ ಮಾಡಿಕೊಂಡಿದ್ದಾರೆ. ಆದರೆ ಎಲ್ಲರಿಗೂ ಗಂಡು ಮಕ್ಕಳೇ ಬೇಕಾಗಿರುವಾಗ ಹೆಣ್ಣನ್ನು ಹಡೆದರೆ ಅವಮಾನವೆಂದು ಗಂಡು ಮಕ್ಕಳ ಹೆಚ್ಚಾಗಿ ಗಂಡು ದೊಡ್ಡವನಾದಾಗ ಮದುವೆಗೆ ಹೆಣ್ಣೆ ಸಿಗದಂತಾಗಿದೆ. ಈಗ ಹೆಣ್ಣು ಮಕ್ಕಳು ಓದಿ ಒಂದು ಕೆಲಸವನ್ನು ಹಿಡಿಯುತ್ತಿರುವಾಗ ಆಕೆ ಆರ್ಥಿಕವಾಗಿಯೂ ಸ್ವತಂತ್ರವಾಗಿರುತ್ತಾಳೆ. ಹೀಗಾಗಿ ಗಂಡುಗಳು ಏಕಾಂಗಿಯಾಗಿ ಅತ್ಯಾಚಾರಗಳು ಹೆಚ್ಚುತ್ತಿವೆ. ಭಾರತ ಜಗತ್ತಿನಲ್ಲಿಯೇ ಹೆಚ್ಚಿನ ಅತ್ಯಾಚಾರಗಳನ್ನು ದಾಖಲು ಮಾಡುತ್ತೇವೆ.

೧೦. ಇದರೆಲ್ಲವೂ, ಆಡಳಿತ ಪೋಲಿಸ್ ಸೊಸೈಟಿಯ ಮೇಲೆ ಹೆಚ್ಚಿನ ಒತ್ತಡವನ್ನು ತಂದಿವೆ. ಯಾವುದಾದರೂ ಒಂದು ವಾದ ಕೋರ್ಟು ಕಟ್ಟೆಗೆ ಹತ್ತಿತೆಂದರೆ ಅದು ತೀರ್ಮಾನವಾಗುವುದು 40 ವರ್ಷಗಳ ನಂತರವೇ. ಇನ್ನು ಕೆಲವು ವಾದಗಳು ಸ್ವಾತಂತ್ರ ಬರುವ ಮುನ್ನವೇ ದಾಖಲಾದವು. ಇದರಲ್ಲಿ ನ್ಯಾಯಾಂಗ ತನ್ನ ಹೊಣೆಗಾರಿಕೆ ಇಲ್ಲ ಸರ್ಕಾರ ಹೆಚ್ಚಿನ ನ್ಯಾಯಾಧೀಶರನ್ನು ನೇಮಕ ಮಾಡಿಲ್ಲ ಎನ್ನುತ್ತದೆ. ಆದರೆ ದಿನದಲ್ಲಿ ಬಂದ ಕೇಸ್ ಗಳನ್ನು ಏನನ್ನು ಕೇಳದೆ ಮುಂದಿನ ತಾರೀಖಿಗೆ ಹಾಕಿಬಿಡುತ್ತಾರೆ. ಎಷ್ಟೋ ಬಾರಿ ವಾದಿಗಳು ಸತ್ತು ಹೋಗಿರುತ್ತಾರೆ. ಇನ್ನು ಕೆಲವು ಬಾರಿ ಪೊಲೀಸರು ಹಿಡಿದು ಒಳಗೆ ಹಾಕಿದ್ದ ಮಂದಿಗೆ ನ್ಯಾಯ ಕಟ್ಟಳೆಯು ಕೇಳದೆ ಜೈಲಿನೊಳಗೆ 42 ವರ್ಷಗಳಿಂದ ಇರುವುದು ದಾಖಲಾಗಿದೆ. ಇದೆಲ್ಲವನ್ನು ನೋಡಿದಾಗ ನಮ್ಮ ಸಮಸ್ಯೆಗಳು ಇಂದೇ ಮುಗಿಯದೆ ಇನ್ನು ಹಲವು ವರ್ಷಗಳು ಕಳೆಯುತ್ತವೆ ಎನ್ನಿಸುತ್ತದೆ. ಇದರಲ್ಲಿ ಎಲ್ಲವನ್ನು ಆಡಳಿತವೇ ಮಾಡಬೇಕೆಂದರೆ ಆಗುವುದಿಲ್ಲ. ಯಾವುದು ತಪ್ಪು ಯಾವುದು ಸರಿ ಎನ್ನುವುದನ್ನು 16 ವರ್ಷದೊಳಗೆ ತಲೆಮಾಸಬೇಕು ಆಗ ತುಸುವಾದರೂ ಒಳಿತಾಗುತ್ತದೆ. ಕಡೆಯದು ಚೀನಾ ಪಾಕಿಸ್ತಾನದಂತಹ ಪಕ್ಕದ ಮನೆಯವರು ಇರುವ ತನಕ ನಾವು ನಮ್ಮ ಎಚ್ಚರವನ್ನು ಇನ್ನೂ ಹೆಚ್ಚು ಮಾಡಿಕೊಳ್ಳಬೇಕು. "ದುಡ್ಡಿರುವವನೆ ದೊಡ್ಡಪ್ಪ" ಎನ್ನುವುದು ಗಿಡವಾಗಿರುವಾಗ ಭಾರತ ಒಂದು ಹಿರಿಯ ಆರ್ಥಿಕ ಬಲವಾದಾಗ ಎಲ್ಲರೂ ನಮ್ಮೆಡೆ ನೋಡಿ ತುಸು ಹೆದರುವುದು ಮೊದಲಾಗುತ್ತದೆ.

**ಭಾರತ ಮಾತೆಗೆ ಗೆಲ್ಗೆ**






**Quickies 1)** What letter comes next in the following sequence: D R M F S T L T ?

**Quickies 2)** Guess the next three letters in the series: G T N T L ? ? ?

**Quickies 3)** What has no hands but might knock on your door and if it does you better open ?

**WORD PUZZLE**




## Identify the letter beginning and ending with same letter:

| | | | |
|---|---|---|---|
| 1_IVI_ | 6_ATHTU_ | 11_ERO_ | 16_OILE_ |
| 2_RUS_ | 7_RAS_ | 12_ENDE_ | 17_OMI_ |
| 3_IDO_ | 8_YPIS_ | 13_HROA_ | 18_ABE_ |
| 4_ROM_ | 9_EAPO_ | 14_REGAN_ | 19_LINI_ |
| 5_USEU_ | 10_ARDIA_ | 15_UMM_ | 20_WI |

**ANSWERS TO THE LAST MONTH QUIZES**

**Quickies 1)** Playing Chess

**Quickies 2)** It is asked how many eyes WE have which means the person who asked is also included.

**Missing numbers:** a) 232*5+5 (1165) b) 41+29+17+12 (99) 41+29 (70) = 99/70.

**Crack the Code:** 062

**Word Puzzles :** 1) Houser Divided 2) Crossed Wires 3) The Mind's eye 4) High Seas 5) Wide Awake 6) Unbalanced 7) Tilting at Windmill 8) Jail Break 9)Lesser of the two evils 10)Back to Basics 11) enlightening 12) Tightwad 13) End in itself 14) Parting of ways 15) Mid night or Middle of the night 16)Six of one, half a dozen of other 17) On the outside looking in 18) G- Men 19) Grand standing 20) United States 21)Big Cheese 22) American Revolution 23) Lickety -split 24)Block Head

***Identify the equations:***

1) Letters in the alphabets 2) Days in a week 3) Arabian Nights 4) Signs of Zodiac 5) Cards in Deck with Jocker. 6) Planets in the Solar system 7) Piano Keys 8) Stripes on American Flags 9) Degree at which Water Freezes 10) Holes in a Golf Course 11) Degrees in Right Angle 12) Sides on Stop Sign 13) Blind Mice's 14) Quarts in 8 Gallon 15) Hours in Day 16) Wheels on a Unicycle 17) Digits in Zip Code 18) Heinz Varieties 20) Woods that Picture is Worth 21) Days in Feb in a Leap Year 22) Squares on a Checker Board 23) Days & Months of a great floods 24) Trombones in the Big Parade 25) Ways to Leave your Lover 26) Bottles of Beer on the Wall 27) Seconds in a minutes 28) Horn on a Unicorn 29) Justices on the Supreme Court 30) Brides of Seven Brothers 31) Dots on a Die 32) Wonders of the Ancient World.

***Compiled by Ananth Banwasi***

# Few more strides before the centenary



✍ **M.A.N. Prasad**

## Making of the Auditorium

**Installation of lifts**: The architect had given us the relevant drawings and the extension of the building was done accordingly. The staircase inside the building and the rooms were dismantled and a new staircase as well as a lift shaft was provided for in the new building. It was presumed that the lift shaft wood accommodates two lifts. But, when we were negotiating with the lift vendors, we learnt that the lift shaft is too large for one lift and too small for two standard lifts. The vendors conveniently suggested that we install one lift and leave the excess space in the shaft. We were keen on having two lifts, as the building will be open to public. After a lot of negotiation, we were able to persuade one of the vendors to fit in two lifts - one standard six-member type and one specially fabricated for us, smaller, five-member type. We could thus fully utilize the lift shaft and have two lifts.

Later, the machine room above the lift shat was being constructed. One evening when I was at the Association, Mr. Mehta the contractor came to me and said that the reinforcement for the concreting of the machine room is ready, please have a look. I had a look and asked him if the structural consultant has had a look? He said that he will get him to have a look tomorrow. While the structural consultant came the next day, during their interaction Mehta mentioned about two machines being accommodated in the machine room, when the consultant said that the reinforcement is designed for the load of one machine and if two machines are planned, he will give a revised design. Accordingly, a revised design was given and base in the machine room was cast. Thank God that we didn't proceed with the design given by him earlier.

**Firefighting system and water tanks:** For a building of our size firefighting systems are not mandatory. However, since it is used by public, we wanted it to have a firefighting system. This meant providing water storage tanks having a capacity of 5,000 litres. To take the load of this, two columns were chosen.

Firefighting system consists of three components - Fire Hydrant system, hand held equipment, and electronic sensors. We thought that if all these components were to be supplied/ installed by one vendor, there will be a good coordination among them and accordingly placed such an order. We noticed that the vendor was not very knowledgeable with the electronic sensors and was possibly sub-contracting it to another party. We called the vendor and told him that we are taking away the electronic device from his order. The vendor was not happy and refused to handle this job. The problem of creating a firefighting system was back on our lap. We decided to give separate orders for each of the components.

**Electrical Panels:** The wiring of the entire building had to be redone. This with the requirements of the auditorium and lifts, we got the entire electrical s ystem designed. Circuits were separated with appropriate switching panels for each floor. A cupboard on the ground floor was converted into a main switching panel. We had switching panels similar to what we could generally see in huge factories.



**Interiors of the Auditorium:** The basic infrastructure of the auditorium was ready. We now needed to equip it with suitable aesthetic looks. The acoustic consultant had given us the design for the speakers. Speakers were got done accordingly. False roofing had to take care of the acoustic requirements.

Accordingly, false roofing and concealed lighting was done. Acoustics of the auditorium was such that even a whisper on the stage was heard in the last row of the auditorium.

Green Rooms and interiors of the Auditorium: Two green rooms, one on each side of the stage, have been created. They are at the level of a mezzanine, allowing enough space below them for the movement of men and materials.



Light and audio equipment: Over 70 lighting points were provided. Suitable patch panel was designed. A control room at the back of the auditorium was created from which the operator could get a full view of the stage. Points for audio system were suitably spread. Sufficient number of mikes was provided. The control room was equipped with a 24-channel mixer and two feedback eliminators. An intercom was provided between the stage and control room. The front curtain of the stage was motorised and could be operated from the control room.



Other infrastructures: Anticipating the need, we got some of our staff trained in handling the stage equipment. Ushers were appointed to handle the traffic in lifts and also manage the audience. Wash room and rest room were created on the terrace. Each time the auditorium was used, janitors were present to keep the rest room clean. An electrician was also present whenever the auditorium was used, to attend to electrical problems, if any. Now that everything was ready, we needed to formally inaugurate the auditorium. We were on the lookout for a suitable person and a suitable date.

# ನೇಸರು ಜಾಗತಿಕ ಏಕಾಂಕ ನಾಟಕ ರಚನಾ ಸ್ಪರ್ಧೆ

ಮೈಸೂರು ಅಸೋಸಿಯೇಷನ್, ಮುಂಬೈ 2016 ರಿಂದ ಜಾಗತಿಕ ಮಟ್ಟದಲ್ಲಿ ಕನ್ನಡ ಕವನ ಸ್ಪರ್ಧೆ, ಕಥಾ ಸ್ಪರ್ಧೆ ಹಾಗೂ ಏಕಾಂಕ ನಾಟಕ ರಚನಾ ಸ್ಪರ್ಧೆಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿದೆ. ಅಂತೆಯೇ ಈ ವರ್ಷವೂ ನಾವು ಏರ್ಪಡಿಸಿರುವ ಏಕಾಂಕ ನಾಟಕ ರಚನಾ ಸ್ಪರ್ಧೆಗೆ 39 ನಾಟಕಗಳು ಬಂದಿವೆ.

**THE MYSORE ASSOCIATION, BOMBAY**
**ಮೈಸೂರು ಅಸೋಸಿಯೇಷನ್, ಮುಂಬೈ**

**ನೇಸರು ಜಾಗತಿಕ ಏಕಾಂಕ ನಾಟಕ ರಚನಾ ಸ್ಪರ್ಧೆ-2022 ವಿಜೇತರು**

ಪ್ರಥಮ



ಡಾ. ಬೇಲೂರು ರಘುನಂದನ್, ಬೆಂಗಳೂರು
ನಾಟಕ : ಶರ್ಮಿಷ್ಠೆ

ದ್ವಿತೀಯ



ಶ್ರೀಮತಿ ವಿನುತಾ ಹಂಚಿನಮನಿ, ಧಾರವಾಡ
ನಾಟಕ : ಪರಿತ್ಯಕ್ತೆ

ತೃತೀಯ



ಶ್ರೀಮತಿ ಅಭಿಲಾಷಾ ಎಸ್., ಉಡುಪಿ
ನಾಟಕ : ಭೀಷ್ಮಾವಲೋಕನ

ತೃತೀಯ



ಶ್ರೀಮತಿ ರಾಜಶ್ರೀ ಟಿ. ರೈ, ಪೆರ್ಲ
ನಾಟಕ : ಚೇಕತ್ತಿ

ತೀರ್ಪುಗಾರರು : ಶ್ರೀಮತಿ ಅಹಲ್ಯ ಬಲ್ಲಾಳ್, ಮುಂಬೈ ಹಾಗೂ ಶ್ರೀ. ಶ್ರೀನಿವಾಸ ಪ್ರಭು, ಬೆಂಗಳೂರು

ಸ್ಪರ್ಧೆಯ ಮೊದಲ ಸುತ್ತಿನ ತೀರ್ಪುಗಾರರಾಗಿ ಖ್ಯಾತ ರಂಗಕರ್ಮಿ ಶ್ರೀಮತಿ ಅಹಲ್ಯಾ ಬಲ್ಲಾಳ್‌ರಲ್ಲಿ 39 ನಾಟಕಗಳಲ್ಲಿ 10 ನಾಟಕಗಳನ್ನು ಆಯ್ಕೆ ಮಾಡಿಕೊಡಬೇಕೆಂದು ವಿನಂತಿಸಿದೆವು. ಅಂತೆಯೇ ಅವರು ಒಪ್ಪಿ 10 ನಾಟಕಗಳನ್ನು ಆಯ್ಕೆ ಮಾಡಿಕೊಟ್ಟರು.

ಎರಡನೆಯ ಸುತ್ತಿನ ತೀರ್ಪುಗಾರರಾಗಲು ಖ್ಯಾತ ಚಲನಚಿತ್ರ ನಟರಾದ ಶ್ರೀ. ಶ್ರೀನಿವಾಸ ಪ್ರಭು ಅವರನ್ನು ಕೇಳಿಕೊಂಡೆವು. ಮೊದಲ ಸುತ್ತಿನಲ್ಲಿ ಆಯ್ಕೆಯಾದ 10 ನಾಟಕಗಳಲ್ಲಿ ಮೂರು ನಾಟಕಗಳನ್ನು ಆಯ್ಕೆ ಮಾಡಿಕೊಡಬೇಕೆಂದು ಕೇಳಿಕೊಂಡೆವು.

ತೀರ್ಪುಗಾರರು ತಮ್ಮೆಲ್ಲ ಕಾರ್ಯಗಳ ನಡುವೆಯೂ ಬಿಡುವು ಮಾಡಿಕೊಂಡು, ನಾಟಕಗಳನ್ನು ಓದಿ ನಿಗದಿತ ವೇಳೆಗೆ ತಮ್ಮ ನಿರ್ಣಯವನ್ನು ನಮಗೆ ತಿಳಿಸಿದರು. ಈ ಪರಿಶ್ರಮಕ್ಕಾಗಿ ನಾವು ಶ್ರೀಮತಿ ಅಹಲ್ಯಾ ಬಲ್ಲಾಳ್ ಹಾಗೂ ಶ್ರೀ ಶ್ರೀನಿವಾಸ ಪ್ರಭು ಅವರಿಗೆ ಋಣಿಯಾಗಿದ್ದೇವೆ.

ಶ್ರೀ ಬೇಲೂರು ರಘುನಂದನ್ ಬೆಂಗಳೂರು ಅವರ "ಶರ್ಮಿಷ್ಠೆ" ನಾಟಕ ಪ್ರಥಮ ಬಹುಮಾನ ಪಡೆದಿದೆ.

ಶ್ರೀಮತಿ ವಿನುತಾ ಹಂಚಿನಮನಿ ಧಾರವಾಡ ಅವರ "ಪರಿತ್ಯಕ್ತೆ" ನಾಟಕ ದ್ವಿತೀಯ ಬಹುಮಾನ ಪಡೆದಿದೆ.

ಶ್ರೀಮತಿ ಅಭಿಲಾಷ ಎಸ್., ಉಡುಪಿ ಅವರ "ಭೀಷ್ಮಾವಲೋಕನ" ಹಾಗೂ ಶ್ರೀಮತಿ ರಾಜಶ್ರೀ ಟಿ. ರೈ, ಪೆರ್ಲ ಅವರ "ಚೇಕತ್ತಿ" ನಾಟಕಗಳು ತೃತೀಯ ಬಹುಮಾನ ಪಡೆದಿವೆ.

ಈ ಕಥಾ ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲ ಸ್ಪರ್ಧಾಳುಗಳಿಗೂ ಹಾಗೂ ವಿಜೇತರಿಗೂ, ಹಾಗೆಯೇ ಸ್ಪರ್ಧೆಯ ಪ್ರಚಾರಕ್ಕೆ ಸ್ಪಂದಿಸಿದ ಎಲ್ಲ ಮಾಧ್ಯಮಗಳಿಗೂ ಮೈಸೂರು ಅಸೋಸಿಯೇಶನ್ ಪರವಾಗಿ ನಲು ಹಾರ್ದಿಕೆಗಳು.

ಇದೇ ತಿಂಗಳ 28ರ ಸಂಜೆ 6.30ಕ್ಕೆ ಮೈಸೂರು ಅಸೋಸಿಯೇಶನ್ನಿನ ಸಭಾಗೃಹದಲ್ಲಿ ಬಹುಮಾನ ವಿತರಣಾ ಕಾರ್ಯಕ್ರಮ ವನ್ನು ಹಮ್ಮಿಕೊಂಡಿದ್ದು, ಸ್ಪರ್ಧೆಯ ವಿಜೇತರನ್ನು ಸನ್ಮಾನಿಸಿ ಪ್ರಶಸ್ತಿಯನ್ನು ನೀಡಲಾಗುವುದು. ಈ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ತಮ್ಮೆಲ್ಲರನ್ನೂ ಕೇಳಿಕೊಳ್ಳುತ್ತೇವೆ.

## ಮುಂಬರುವ ಕಾರ್ಯಕ್ರಮಗಳು

**ಭಾನುವಾರ, ಮೇ 28, 2023 – ಸಂಜೆ 6.30ಕ್ಕೆ**
ಅಸೋಸಿಯೇಷನ್ನಿನ ನಾಟಕ ಬರೆಯುವ ಸ್ಪರ್ಧೆಯ ವಿಜೇತರಿಗೆ
ಬಹುಮಾನ ವಿತರಣಾ ಕಾರ್ಯಕ್ರಮ ಹಾಗೂ ಕನ್ನಡ ನಾಟಕ

**'ಚಿಟ್ಟೆ'**

**ಕು. ಗೋಕುಲ ಸಹೃದಯ**
ಅವರಿಂದ ಏಕ ವ್ಯಕ್ತಿ ರಂಗಪ್ರಯೋಗ

ನಿರ್ದೇಶಕರು :
ಶ್ರೀ ಕೃಷ್ಣಮೂರ್ತಿ ಕವತಾರ್
ಕಥೆ :
ಬೇಲೂರು ರಘನಂದನ್

ಸ್ಥಳ : ಮೈಸೂರು ಅಸೋಸಿಯೇಷನ್ ಸಭಾಗೃಹ, 393, ಬಾವುದಾಜಿ ರಸ್ತೆ, ಮುಂಬಯಿ–400019

**ಜೂನ್ 17, 2023, ಶನಿವಾರ ಗಂಟೆ ಸಾಯಂ. 6.30ಕ್ಕೆ**
ಕೃತ್ತಿಕಾ ಶ್ರೀನಿವಾಸನ್ ಮತ್ತು ತಂಡ

**ಕರ್ನಾಟಕ ಶಾಸ್ತ್ರೀಯ ಸಂಗೀತ**

ಸ್ಥಳ : ಮೈಸೂರು ಅಸೋಸಿಯೇಷನ್ ಕಿರು ಸಭಾಗೃಹ, 393, ಭಾವುದಾಜಿ ರಸ್ತೆ, ಮಾಟುಂಗ, ಮುಂಬಯಿ – 400 019.

ಎಲ್ಲರಿಗೂ ಆದರದ ಸ್ವಾಗತ

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077